# ಸಿರಿಗೌರಿ ಚೆಂಗಳಕವ್ವ

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ - ಕನ್ನಡಿಗ - ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಕೊಂಡ ಈ ವಿದ್ವತ್ ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ

ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ : ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ. 'ಸಿರಿಗೌರಿ ಚೆಂಗಳಕವ್ವ' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಶ್ರೀ ಶಿವಾನಂದ ಶೆಲ್ಲಿಕೇರಿ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

**ಡಾ. ಎ. ಮುರಿಗೆಪ್ಪ**
ಕುಲಪತಿ

(೧)

ಕೃಷಿ ಬದುಕು ಎನ್ನುವುದು ಆಚರಣೆಗಳ ಗೊಂಚಲು. ವರ್ಷದ ಹನ್ನೆರಡು ತಿಂಗಳೂ ಜೀವಂತವಾಗಿರುವ ಹಬ್ಬ ಹಾಗೂ ಆಚರಣೆಗಳು ಜನಜೀವನದ ಕಾಲಬದ್ಧ ಸಂಭ್ರಮ ಹಾಗೂ ಸಮೃದ್ಧಿಯ ಸಂಕೇತಗಳು. ವಿಶೇಷವಾಗಿ ಮುಂಗಾರು ಹಂಗಾಮಿನ ಜ್ಯೈಷ್ಠ, ಆಷಾಢ, ಶ್ರಾವಣ, ಭಾದ್ರಪದ, ಆಶ್ವೀಜ ಮಾಸಗಳಂತೂ ಭೂಮಿ ಪೂಜೆಯ ಸಮೃದ್ಧ ಸಂಗತಿಗಳನ್ನು ಗರ್ಭೀಕರಿಸಿ ಕೊಂಡಿರುವಂಥವು. ಮಣ್ಣೆತ್ತಿನ ಅಮಾವಾಸ್ಯೆಯಿಂದ ಆರಂಭವಾಗುವ ಭೂಮಿ ಪೂಜೆಯ ಪ್ರಕ್ರಿಯೆಗಳು ಭೂಮಿಯ ನಿಸರ್ಗಮುಖಿ ಬೆಳವಣಿಗೆಯೊಂದಿಗೆ ಕರಳುಬಳ್ಳಿಯ ಸಂಬಂಧವನ್ನು ಹೊಂದಿವೆ. ಫಲವಂತಿಕೆ ಮತ್ತು ಫಲಸಮೃದ್ಧಿಯ ಆಶಯಗಳನ್ನು ಪ್ರಧಾನವಾಗಿ ತೆರೆದು ತೋರಿಸುವ ಈ ಆಚರಣೆಗಳು ಮಾನವ ಬದುಕಿನೊಂದಿಗೆ ನಿಕಟ ಸಂಬಂಧವನ್ನು ಹೊಂದಿವೆ.

ಮಾನವ ತನ್ನ ಆರಾಧನಾ ದೈವಗಳಿಗೆ ತಾನು ಅನುಭವಿಸುವ ಮದ್ಯ, ಮಾಂಸ, ಮೈಥುನ, ಋತುಚಕ್ರಗಳ ಲೌಕಿಕಾನುಭವಗಳನ್ನು ಹೊಂದಿಸುವುದು ಹೊಸತೇನಲ್ಲ. ಇದು ದೈವಕ್ಕೂ ಹಾಗೂ ಮಾನವ ಸಂಬಂಧಕ್ಕೂ ಇದ್ದ ನಿಷ್ಕಲ್ಮಷ ವಾತಾವರಣದ ರೀತಿಯನ್ನು ತಿಳಿಸಿಕೊಡುತ್ತದೆ. ಭೂಮಿಯನ್ನು ಹೆಣ್ಣಾಗಿ ಭಾವಿಸಿ ತಾಯಿ, ದೇವಿ, ಮಗಳು, ಸೊಸೆ ಎನ್ನುವ ಭಾವನೆಯಿಂದ ಸ್ವೀಕರಿಸುವುದೇ ಇದಕ್ಕೆ ಒಳ್ಳೆ ನಿದರ್ಶನ. ಚೆಂಗಳವ್ವ ಆಚರಣೆಯಲ್ಲಿ ದೇವರು ಮತ್ತು ಮಾನವರ ಈ ಸಾಮಾಜಿಕ ಸಂಬಂಧಗಳನ್ನು ವಿಶೇಷವಾಗಿ ಕಾಣಬಹುದು. ಇಡೀ ಆಚರಣೆಯೇ ಕೌಟುಂಬಿಕ ನೆಲೆಯಿಂದ ಆರಂಭವಾಗಿ ಸಾರ್ವತ್ರೀಕರಣಗೊಳ್ಳುವ ಬಗೆಯೇ ಆಚರಣೆಯ ಜಾತ್ಯಾತೀತ ನಿಲುವುಗಳನ್ನು ಕಟ್ಟಿಕೊಡುತ್ತದೆ.

**ಆಚರಣಾತ್ಮಕ ಸಂಗತಿಗಳು**

ಚೆಂಗಳವ್ವ ಆಚರಣೆಯು ಸಾಮಾನ್ಯವಾಗಿ ಉತ್ತರ ಕರ್ನಾಟಕದಲ್ಲಿ ಅದೂ ಹೊಳಿ ದಂಡೆಯ ಊರುಗಳಲ್ಲಿ ವಿಶೇಷವಾಗಿ ಕಾಣುತ್ತದೆ. ನಾಗರಪಂಚಮಿಯ ಮರುದಿನ ಅಥವಾ ಎರಡು ಮೂರು ದಿನದ ನಂತರ ಚೆಂಗಳವ್ವ ಆಚರಣೆ ನಡೆಯುತ್ತದೆ. ಆಯಾ ಊರಿನ ಭೌಗೋಳಿಕ ಹಾಗೂ ಸಾಮಾಜಿಕ ಸಂರಚನೆಯ ಮೇಲೆ ಇದರ ದಿನಗಳು ನಿರ್ಧರಿತವಾಗುತ್ತವೆ. ಒಟ್ಟಿನಲ್ಲಿ ನಾಗರಪಂಚಮಿ ಮುಗಿದ

ನಾಲ್ಕೈದು ದಿನಗಳ ಅಂತರದಲ್ಲಿ ಈ ಆಚರಣೆ ನಡೆಯುತ್ತದೆ. ನನ್ನ ಊರನ್ನು (ಬೆಣ್ಣೂರು) ಕೇಂದ್ರೀಕರಿಸಿಕೊಂಡು ಹೇಳುವುದಾದರೇ ನಾಗರಪಂಚಮಿಯಾದ ಐದನೇ ದಿನಕ್ಕೆ ಈ ಚೆಂಗಳವ್ವನ ಹಬ್ಬವನ್ನು ಆಚರಿಸುತ್ತಾರೆ.

**ಆಚರಣೆಯ ಉದ್ದೇಶ**

ಆಯಾ ಊರಿನ ಕುಂಬಾರರ ಮನೆಯೇ ಚೆಂಗಳವ್ವನ ತವರುಮನೆ. ಕಾರಣ ಅವಳ ಹುಟ್ಟು ಅಲ್ಲೇ. ಗುಳ್ಳವ್ವನ ನಂತರ ಬರುವ ಎರಡನೇ ಮಣ್ಣಿನ ಆಚರಣೆ ಇದು. ಚೆಂಗಳವ್ವನ ಕೂಡಿಸುವ ದಿನ, ಮೊದಲು ಊರ ತಳವಾರರು ಅಥವಾ ಬಾರಿಕೇರರು (ಗಂಗಾಮತಸ್ಥರು) ಹೊಳಿಯಿಂದ ಅರಲು ತಂದು ಊರಿನ ಒಂದು ಬಯಲು ಜಾಗದ ಕಟ್ಟೆಯ ಮೇಲೆ ಸಣ್ಣ ಸಣ್ಣ ಮಡಿಗಳನ್ನು ಮಾಡಿ ಅದರಲ್ಲಿ ನವಧಾನ್ಯಗಳನ್ನು ತುಂಬಿ ಪೂಜಿಸಿ ನಂತರ ಮಡಿಗಳನ್ನು ಕೆಡಿಸುತ್ತಾರೆ. ಆಮೇಲೆ ಅದೇ ಅರಲಿನಿಂದ ಚೆಂಗಳಿಕವ್ವ ಮತ್ತು ಬಸವಣ್ಣನನ್ನು ಮಾಡುತ್ತಾರೆ. ಕುಂಬಾರರು ಇಲ್ಲದ ಊರಿನಲ್ಲಿ ಪತ್ತಾರ ಅಥವಾ ಬಡಿಗವೃತ್ತಿಯ ಪಾಂಚಾಳ ಕುಲದವರು ಚೆಂಗಳವ್ವನ ಮೂರ್ತಿ ಮಾಡಿಕೊಡುತ್ತಾರೆ. ಒಂದೊಂದು ಊರಲ್ಲಿ ಅರಲಿನ ಬದಲಾಗಿ ಶಾಶ್ವತವಾಗಿ ಕಟ್ಟಿಗೆ ಮೂರ್ತಿಗಳನ್ನೇ ಇಟ್ಟಿರುತ್ತಾರೆ. ಹಬ್ಬ ಬಂದಾಗ ಅವುಗಳನ್ನು ಜೋಡಿಸಿ ಸಿಂಗರಿಸಿ ಬಳಸಿಕೊಳ್ಳುವುದನ್ನು ಕಾಣುತ್ತೇವೆ. ಹೀಗೆ ಕಟ್ಟಿಗೆ ಅಥವಾ ಅರಲಿನಲ್ಲಿ ರೂಪತಳೆದು ಅಲಂಕೃತಗೊಂಡ ಚೆಂಗಳವ್ವನನ್ನು ಕುಂಬಾರರ ಮನೆಯಿಂದ ಹೊರಡಿಸುತ್ತಾರೆ. ಇದು ತವರು ಮನೆಯಾದ ಕಾರಣ ಮನೆ ಹೆಣ್ಣು ಮಗಳನ್ನು ಕಳುಹಿಸುವಾಗ ಮಾಡುವ ಎಲ್ಲ ರೀತಿಯ ತಯಾರಿಗಳನ್ನು ಹಾಗೂ ನಿಯಮಗಳನ್ನು ಅನುಸರಿಸುತ್ತಾರೆ. ಬಹಳ ಮುಖ್ಯವಾಗಿ ನೂಲಿನ ಹಸಿರು ಸೀರೆ, ಹಸಿರು ಕುಪ್ಪಸ, ಚೆಂಗಳವ್ವನ ವಸ್ತ್ರವಾಗಿರುತ್ತವೆ. ಇದಕ್ಕೆ ಹೊಂದಿಕೆಯಾಗುವಂತೆ ನತ್ತು, ಬಾವಲಿ, ರಿಕ್ಕೆ, ಡಾಬು, ತಾಲೂಕು ಎಲ್ಲ ರೀತಿಯ ಆಭರಣಗಳನ್ನು ತೊಡಿಸುತ್ತಾರೆ. ಇದನ್ನು ಮನೆಯ ಸೊಸೆ ಅಥವಾ ಹೆಣ್ಣು (ಮಕ್ಕಳ) ಮಗಳು ಯಾರಾದರೂ ಮಾಡಬಹುದು. ಹೀಗೆ ಅಲಂಕಾರಗೊಂಡ ಮೇಲೆ ಊರ ಬಾಂಧವರಾದ ಗೌಡ, ಕುಲಕರ್ಣಿ, ಶಾನುಭೋಗ, ವಾಲೀಕಾರ, ತಳವಾರ ಇವರ ಸಮಕ್ಷಮದಲ್ಲಿ ಅಕ್ಕಿ ಅಥವಾ ಗೋದಿ, ಉತ್ತುತ್ತಿ, ಮಕ್ಕಳ ಅರಿಷಿಣ, ಅಡಿಕೆ ಇಂತಹ ಧಾನ್ಯ ಪದಾರ್ಥಗಳನ್ನು ಹಾಗೂ ಹೂ, ಹಣ್ಣು, ತಾಂಬೂಲಗಳನ್ನಿಟ್ಟು ಉಡಿ ತುಂಬುತ್ತಾರೆ. ಉಡಿ ತುಂಬಿದ ಮೇಲೆ ಬಸವಣ್ಣನ ಸಮೇತ ಗಂಡನ ಮನೆಯಾದ ಗೌಡರ ಮನೆಗೆ ಕರೆದೊಯ್ಯುತ್ತಾರೆ. ಹೀಗೆ ಕರೆದೊಯ್ಯುವ ಮೊದಲು ಬಾಜಾ ಭಜಂತ್ರಿ ಸಮೇತ ಊರಿನಲ್ಲಿ ಮೆರವಣಿಗೆ ಮಾಡುತ್ತಾ ಊರ ಚಾವಡಿಗೆ ಬಂದು ಕೂರಿಸುತ್ತಾರೆ. ಅಷ್ಟೊತ್ತಿಗೆ ಊರ ಜನರೆಲ್ಲಾ ಹೊಸ ಬಟ್ಟೆ ಧರಿಸಿ ಬಂದು ಸೇರಿರುತ್ತಾರೆ. ಚೆಂಗಳವ್ವ ಬಂದು ಚಾವಡಿಗೆ ಕುಳಿತ ಕೂಡಲೇ ಚಾಕರಿಯವರಾದ ತಳವಾರ, ಬಾರಕೇರರು ಮೊದಲೇ ಚಾವಡಿಯ ಆವರಣದ ಮೂಲೆ ಮೂಲೆಯಲ್ಲಿ ಕೂಡಿ ಹಾಕಿದ ಹೆಂಡಿ (ಸಗಣಿ) ಯನ್ನು ತೆಗೆದುಕೊಂಡು ಪರಸ್ಪರ ಎರಚಾಡಲು ಆರಂಭಿಸುತ್ತಾರೆ. ಒಂದೊಂದು ಸಲ ನೆರೆದ ಪ್ರೇಕ್ಷಕರತ್ತಲೂ ಎಸೆದು ಖುಷಿ ಪಡುತ್ತಿರುತ್ತಾರೆ. ಇಡೀ ವಾತಾವರಣವೇ ಮನೋರಂಜಕವಾಗಿರುತ್ತದೆ. ಸುಮಾರು ಹೊತ್ತು ನಡೆಯುವ ಈ ಹೆಂಡಿ ಆಟದಲ್ಲಿ ನಗುವೇ ಬಹುಮುಖ್ಯ ಪಾತ್ರವಹಿಸುತ್ತದೆ. ಇದನ್ನು "ಹೆಂಡಿ ಆಟ"ವೆಂದೇ ಗುರುತಿಸಲಾಗುತ್ತದೆ. ನಂತರ ವಾದ್ಯಗಳ ಸಮೇತ ಹೊಳಿಗೆ ಹೋಗಿ ಸ್ನಾನ ಮಾಡಿ ಬರಲಾಗುತ್ತದೆ. ಆಮೇಲೆ ಚೆಂಗಳವ್ವನನ್ನು ಗೌಡರ ಮನೆಗೆ (ಗಂಡನ ಮನೆಗೆ) ಕರೆತರಲಾಗುತ್ತದೆ. ಇಲ್ಲಿಗೆ ಮೊದಲ ದಿನದ ಕಾರ್ಯಕ್ರಮ ಮುಕ್ತಾಯವಾಗುತ್ತದೆ.

ಹೆಂಡಿಯ ಮರುದಿನ "ಹೋಳಿಗೆ ಮಾಡುವುದು" ಇರುತ್ತದೆ. ಈ ದಿನ ಗಂಡನ ಮನೆಯವರು ಕರಿಗಡಬು, ಹುರಿಯಕ್ಕಿ ಕರ್ಚಿಕಾಯಿ, ರೊಟ್ಟಿ ಮಾಡಿಕೊಂಡು ಊರ ಪರಿವಾರ ಸಮೇತ ಗಂಗಿಸ್ಥಾನಕ್ಕೆ ಹೋಗುತ್ತಾರೆ. ಈ ಹಬ್ಬ ಬರುವುದಕ್ಕಿಂತ ಒಂದುವಾರ ಮೊದಲೇ ಸಣ್ಣ ಸಣ್ಣ ಮುಚ್ಚಳ, ಪಟ್ಟಿ, ಪಾತ್ರೆಗಳಲ್ಲಿ ಕರಿಮಣ್ಣು ತುಂಬಿ ಗೋಧಿ ಹಾಗೂ ಜೋಳಗಳನ್ನು ಬಿತ್ತಿ ಅದನ್ನು ಕತ್ತಲಲ್ಲಿ ಇಟ್ಟು ಮೊಳಕೆಯೊಡೆಸಿರುತ್ತಾರೆ. ಸೂರ್ಯ ಬೆಳಕು ಕಾಣದ ಅವು ಚೆಂಗಳವ್ವನ ಆಟದ ಹೊತ್ತಿಗೆ ಹಳದಿಯಾಗಿ ಗೇಣು ಗೇಣುದ್ದ ಬೆಳೆದು ಸಸಿಗಳಾಗಿರುತ್ತವೆ. ಇವನ್ನು ಸಸಿಗಳೆಂದೇ ಗುರುತಿಸುತ್ತಾರೆ. ಇಡೀ ಊರಿನ ಜನರು ಈ ರೀತಿ ಸಸಿಗಳನ್ನು ಬೆಳೆಸಿ ಬುತ್ತಿ ತಗೊಂಡು ಚೆಂಗಳವ್ವನೊಂದಿಗೆ ಹೊಳಿದಂಡಿಗೆ ಬರುತ್ತಾರೆ.

ಹೊಳಿದಂಡಿಗೆ ಬಂದು ಚೆಂಗಳವ್ವನನ್ನು ಕೂರಿಸಿ ಚೆಂಗಳವ್ವ ಬಸವಣ್ಣ ಮತ್ತು ಹೊಳಿಗಂಗವ್ವಗೆ ಪೂಜೆ ಮಾಡಿ ಸಸಿ ಮುಡಿಸುತ್ತಾರೆ. ನಂತರ ಸಾಮೂಹಿಕ ಭೋಜನ ನಡೆಯುತ್ತದೆ. ಕುಲಭೇದದ ಪರಿವೆಯಿಲ್ಲದ ಈ ಸಹಭೋಜನ ಸಾಂಸ್ಕೃತಿಕ ಹೊಕ್ಕು ಬಳಕೆಗಳ

ಉತ್ತಮ ಅಧ್ಯಯನವೇ ಆಗಿದೆ. ನಂತರ ತಿರುಗಿ ವಾದ್ಯ ಸಮೇತ ಎಲ್ಲರೂ ಮನೆಗಳಿಗೆ ಹಿಂದಿರುಗುತ್ತಾರೆ. ಗೌಡರ ಮನೆಗೆ ಬಂದ ಮೇಲೆ ಚೆಂಗಳವ್ವನನ್ನು ಬಿಚ್ಚಿ ಹಾಕಿದ ವಸ್ತ್ರ ಒಡವೆಗಳೆಲ್ಲವನ್ನು ತೆಗೆದು ಒಂದು ಸುರಕ್ಷಿತ ಜಾಗದಲ್ಲಿಟ್ಟು ಬಿಡುತ್ತಾರೆ. ಮತ್ತೆ ಮುಂದಿನ ವರ್ಷವೇ ಇವರಿಬ್ಬರನ್ನು ಹೊರತೆಗೆಯುವುದು. ಈ ನಡುವೆ ಬರುವ ಯಾವುದೇ ಹಬ್ಬ ಹರಿದಿನಗಳಲ್ಲಿ ಯಾವ ರೀತಿ ಪೂಜೆಯೂ ಇವರಿಗೆ ಸಲ್ಲುವುದಿಲ್ಲ.

**ಯಂಡಿಗೇರಿ**

ಇತಿಹಾಸ ಪ್ರಸಿದ್ಧ ಬಾದಾಮಿ ತಾಲೂಕಿನಲ್ಲಿ ಬರುವ ಯಂಡಿಗೇರಿ ಗ್ರಾಮ ಜಾನಪದ ಕಲೆಗಳ ಹಾಗೂ ಜಾನಪದ ಸಂಪ್ರದಾಯಗಳ ತವರೂರು. ನಿತ್ಯ ನಡೆಯುವ ಶಿವ ಭಜನೆ, ಶ್ರೀಕೃಷ್ಣ ಪಾರಿಜಾತ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮದಂತಹ ಬೈಲಾಟಗಳನ್ನು ಶತಮಾನಗಳಿಂದ ನೋಡುತ್ತ ಮತ್ತು ಅಭಿನಯಿಸುತ್ತ ಬಂದ ಒಂದು ಚಿಕ್ಕ ಹಳ್ಳಿ ಯಂಡಿಗೇರಿ. ಹೆಚ್ಚಿನ ಸಂಖ್ಯೆಯಲ್ಲಿ ವೀರಶೈವರಿರುವ ಈ ಗ್ರಾಮದಲ್ಲಿ ಎಲ್ಲ ಧರ್ಮಿಯರು ಒಗ್ಗಟ್ಟಿನಿಂದ ಹಲವಾರು ಜಾನಪದ ಆಚರಣೆಗಳನ್ನು ಹಿಂದಿನಿಂದಲೂ ಮಾಡುತ್ತಾ ಬಂದಿದ್ದು, ಆ ಕೆಲವೇ ಕೆಲವು ಆಚರಣೆಗಳಲ್ಲಿ ಶಿವಶರಣೆ ಚೆಂಗಳಕವ್ವ ಆಚರಣೆಯು ಒಂದು.

ನಾಗರ ಪಂಚಮಿ ವರ್ಷ ತೊಡಕದ ದಿವಸ ಶಿವಶರಣೆ ಚೆಂಗಳಕವ್ವ ಮೂರ್ತಿಯನ್ನು ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಸ್ಥಾಪನೆ ಮಾಡುವರು. ಸ್ಥಾಪನೆ ಮಾಡಿದ ದಿವಸ ಶ್ರೀ ಹೊಳಬಸಪ್ಪ ಶೀಲವಂತರ ಮನೆಯಲ್ಲಿ ಪದ್ಧತಿಯ ಪ್ರಕಾರ ಉಡಿಯಕ್ಕಿ ಹಾಕಿಸಿಕೊಂಡು ಹೋಗಿ ಗುಡಿಯಲ್ಲಿ ಚೆಂಗಳಕವ್ವನನ್ನು ಸ್ಥಾಪನೆ ಮಾಡುವರು. ಸ್ಥಾಪನೆ ಮಾಡುವ ದಿವಸ ಊರಿನ ಹೆಣ್ಣುಮಕ್ಕಳು ಎರಡು ಗುಂಪುಗಳಾಗಿ ಅರಲು ಆಡುವರು. ಪ್ರತಿ ದಿವಸ ಬೇರೆ ಬೇರೆ ತರಹದ ಸೀರೆಗಳನ್ನು ತಂದು ಉಡಿಸಿ ಬೊರಮಾಳ, ಗುನಗಡಗಿ, ಮುಂತಾದ ಅಲಂಕಾರದ ವಸ್ತುಗಳನ್ನು ಹಾಕಿ ಶೃಂಗಾರ ಮಾಡುವರು. ಪ್ರತಿದಿನ ರಾತ್ರಿ ಊರಿನ ಹೆಣ್ಣು ಮಕ್ಕಳು ಕೂಡಿಕೊಂಡು ಹಾಡು ಹೇಳುವರು ಮತ್ತು ಆರತಿ ಮಾಡುವರು. ಗ್ರಾಮೀಣ ಭಾಗದ ಸಂತಾನ ದೇವತೆಯಾಗಿ ಪೂಜೆಗೊಳ್ಳುವ ಚೆಂಗಳಕವ್ವ ಭಕ್ತರ ಇಷ್ಟಾರ್ಥಗಳನ್ನು ಪೂರ್ತಿ ಮಾಡುವ ಶಕ್ತಿದೇವತೆಯಾಗಿದ್ದಾಳೆ.

ಊರ ಮಠಪತಿ ಊರ ತುಂಬೆಲ್ಲಾ ತಿರುಗಾಡಿ ಪಟ್ಟಿ ಮಾಡಿ ಹಣ ಸಂಗ್ರಹಣೆ ಮಾಡುವುದರ ಜೊತೆಗೆ ಪ್ರತಿ ದಿವಸ ಮುಂಜಾನೆ ಪೂಜೆ ಹಾಗೂ ಸಾಯಂಕಾಲದ ಪೂಜೆಯನ್ನು ಇವನೇ ನೆರವೇರಿಸುತ್ತಾನೆ. ಊರಿನ ವಾಲೀಕಾರ ಪ್ರತಿದಿನ ರಾತ್ರಿ ಕಾವಲು ಮಾಡುತ್ತಾನೆ. ಊರಿನ ಹಿರಿಯರು ಮಠಪತಿ ಹಾಗೂ ವಾಲೀಕಾರನಿಗೆ ಕೂಡಿದ ಪಟ್ಟಿಯಲ್ಲಿ ಕಾಣಿಕೆ ಕೊಡುವರು. ವರ್ಷ ತೊಡಕದ ಮಳ್ಳಾ ಮರು ದಿವಸ ಚೆಂಗಳಕವ್ವನನ್ನು ಹೊಳಿಗೆ ಕಳಿಸುತ್ತಾರೆ. ಮಹಾಶಿವಶರಣೆ ಚೆಂಗಳಕವ್ವ ಹೊಳಿಗೆ ಹೋಗುವ ದಿವಸ ಶ್ರೀ ಹೊಳಬಸಪ್ಪ ಶೀಲವಂತರ, ಶ್ರೀ ಮಲ್ಲಪ್ಪ ಶಿವಬಸಪ್ಪ ನಡುಮನಿ, ಶ್ರೀ ಹಣಮಂತಗೌಡ ಪಾಟೀಲ ಹಾಗೂ ಶ್ರೀ ವಿರೂಪಾಕ್ಷಯ್ಯ ಹಿರೇಮಠರ ಮನೆಗೆ ಭವ್ಯ ಮೆರವಣಿಗೆಯಲ್ಲಿ ಹೋಗಿ ಉಡಿಯಕ್ಕಿ ಹಾಕಿಸಿಕೊಂಡು ಬರುವುದು ಈ ಊರಿನ ಪದ್ಧತಿ. ಈ ನಾಲ್ಕು ಮನೆಯವರ ಮನೆಗೆ ಹೋಗಿ ಬರುವಲ್ಲಿಗೆ ಸಮಯ ಸಾಯಂಕಾಲ ೫ ಗಂಟೆಯಾಗಿರುತ್ತದೆ. ಊರಿನ ಎಲ್ಲ ಮಹಿಳೆಯರು ಬಾಜಾ ಭಜಂತ್ರಿಯವರೊಂದಿಗೆ ಚೆಂಗಳಕವ್ವನನ್ನು ಊರಿನ ಮುಂದೆ ಇರುವ ಹಳ್ಳಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಪದ್ಧತಿಯ ಪ್ರಕಾರ ಪೂಜಾ ಕಾರ್ಯಕ್ರಮಗಳನ್ನು ಮುಗಿಸಿ ವಿಸರ್ಜನೆ ಕಾರ್ಯ ಮಾಡುವರು.

**ಕಟ್ಟಿಗೆಯ ಮೂರ್ತಿ**

ಈ ಗ್ರಾಮದಲ್ಲಿ ಕಟ್ಟಿಗೆಯಿಂದ ಮಾಡಿದಂಥ ಮೂರ್ತಿ ಇದ್ದು ಪದ್ಧತಿಯಂತೆ ವಿಸರ್ಜನೆಯ ಕಾರ್ಯಗಳನ್ನು ಮಾಡಿ ಆ ಮೂರ್ತಿಗೆ ಅರಬಿಯನ್ನು ಕಟ್ಟಿಕೊಂಡು ಮರಳಿ ಗುಡಿಯಲ್ಲಿ ತಂದು ಇಡುತ್ತಾರೆ. ಊರಿನ ಮಠಪತಿ ಮತ್ತು ಮುಂದಿನ ವರ್ಷ ತಿಥಿ ಆಧಾರದ ಮೇಲೆ ಚೆಂಗಳಕವ್ವ ಆಚರಣೆ ನೆಡಸುವದು ಈ ಊರಿನ ಪದ್ಧತಿಯಾಗಿದೆ.

**ಹೆರಕಲ್**

ಬಾಗಲಕೋಟೆ ಜಿಲ್ಲೆ ಬೀಳಗಿ ತಾಲೂಕಿನ ಕೆಲವೇ ಕೆಲವು ದೊಡ್ಡ ಹಳ್ಳಿಗಳಲ್ಲಿ ಹೆರಕಲ್ ಗ್ರಾಮವೂ ಒಂದು. ಅಚ್ಚ ಗ್ರಾಮೀಣ ಸಂಸ್ಕೃತಿಯ ಸೊಗಡಿನಿಂದ ಕೂಡಿದ ಈ ಗ್ರಾಮದಲ್ಲಿ ಜಾನಪದ ಆಚರಣೆಗಳಿಗೇನು ಬರವಿಲ್ಲಾ. ಆದರೆ ಇಂಥ ಆಚರಣೆಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿದ ಈ ಗ್ರಾಮ ಆಲಮಟ್ಟಿ ಹಿನ್ನೀರಿನಿಂದ ಸಂಪೂರ್ಣವಾಗಿ ಮುಳಗಡೆಯಾಗಿದೆ. ಪುನರ್‌ವಸತಿ ಕಲ್ಪಿಸಿದ ಸ್ಥಳದಲ್ಲಿ ಹೋಗಿ ನೆಲಸಿದ ಇಲ್ಲಿಯ ಜನರು ತಮ್ಮ ಹಿಂದಿನ ಎಲ್ಲಾ ಆಚರಣೆಗಳನ್ನು ಚಾಚು ತಪ್ಪದೇ ಆಚರಣೆ ಮಾಡುತ್ತಾ ಹೊರಟಿದ್ದಾರೆ. ಅದಕ್ಕೊಂದು ತಾಜಾ ಉದಾಹರಣೆ "ಶಿವಶರಣೆ ಚೆಂಗಳಕವ್ವ ಆಚರಣೆ".

ಶ್ರಾವಣ ಶುದ್ಧ ಚತುರ್ಥಿ ದಿವಸ ಮನೆಯಲ್ಲಿ ನಾಗಪ್ಪನಿಗೆ ಹಾಲು ಹೊಯ್ಯುವುದು, ಪಂಚಮಿ ದಿವಸ ಊರಿನ ಆರಾಧ್ಯ ದೇವರಾದ ಮಾರುತಿ ದೇವಸ್ಥಾನದಲ್ಲಿ ಊರಿನ ಜನ ಸಾರ್ವತ್ರಿಕವಾಗಿ ನಾಗಪ್ಪನಿಗೆ ಹಾಲು ಎರೆಯುವುದು. ಶ್ರಾವಣ ಶುದ್ಧ ಷಷ್ಠಿ (ವರ್ಷ ತೊಡಕು) ದಿವಸ ಚೆಂಗಳಕವ್ವನ ಸ್ಥಾಪನೆ ಮಾಡುವುದು.

**ಸ್ಥಾಪನೆ ಪದ್ಧತಿ ಮತ್ತು ಆಚರಣೆಗಳು**

ಷಷ್ಠಿ ದಿವಸ ಊರಿನ ಓಲೇಕಾರ ಚೆಂಗಳಕವ್ವನ ಸ್ಥಾಪನೆ ಮಾಡುವ ಸ್ಥಳದಲ್ಲಿ ನದಿಯಿಂದ ಅರಲು ತಂದು ಒಗಿಯುವನು. ಸಾಯಂಕಾಲ ಓಣಿಯ ಮತ್ತು ಊರಿನ ಎಲ್ಲ ಹೆಣ್ಣುಮಕ್ಕಳು ಸೇರಿಕೊಂಡು ಚೆಂಗಳಕವ್ವನ ಮೂರ್ತಿ ತಯಾರಿಸುವರು. ಈ ಊರಿನಲ್ಲಿ ಮುಖ ಮಾತ್ರ ಕಟ್ಟಿಗೆಯಿಂದ ಮಾಡಿದ್ದು, ಉಳಿದೆಲ್ಲ ಶರೀರ ರಚನೆಯನ್ನು ಕೆಸರಿನಿಂದ ಮಾಡಿರುತ್ತಾರೆ. ಹೆರಕಲ್ ಗ್ರಾಮದಲ್ಲಿ ಎರಡು ಓಣಿಯಲ್ಲಿ ಎರಡು ದಿವಸ ಚೆಂಗಳಕವ್ವನ ಜಾತ್ರೆಯನ್ನು ಮಾಡುತ್ತಾರೆ. ವರ್ಷ ತೊಡಕು ದಿವಸ ನಾಯಕ ಮಕ್ಕಳ ಓಣಿಯಲ್ಲಿ ಚೆಂಗಳಕವ್ವನ ಸ್ಥಾಪನೆ ಮಾಡಿದರೆ ಇದರ ಎಲ್ಲ ಬಾಬ್ತನ್ನು ಈ ಗ್ರಾಮದ ಮೇಟಿಯವರು ನಡೆಸಿಕೊಂಡು ಹೋಗುವರು. ಮರುದಿವಸ ಲಿಂಗಾಯತರ ಓಣಿಯ ಚೆಂಗಳಕವ್ವ ಸ್ಥಾಪನೆ ಮಾಡುವರು. ಇಲ್ಲಿಯ ಎಲ್ಲ ಬಾಬ್ತುಗಳನ್ನು ಈ ಊರಿನ ಜಾಡಗೌಡರು ನಿರ್ವಹಿಸಿಕೊಂಡು ಹೋಗುತ್ತಾರೆ. ಚೆಂಗಳಕವ್ವನ ಸ್ಥಾಪನೆಯ ದಿವಸ ಮುಂಜಾನೆ ಹೂಗಾರರ ಮನೆಗೆ ಹಾಗೂ ಪತ್ತಾರರ ಮನೆಗೆ ಹೋಗಿ ಅವರಿಗೆ ಬಾಬ್ತು ಕೊಟ್ಟು ಬರುತ್ತಾರೆ. ಸಾಯಂಕಾಲ ಊದಿಸುತ್ತ, ಬಾರಿಸುತ್ತ ಅವರು ಮನೆಗೆ ಹೋಗಿ ಅಲ್ಲಿ ಇದ್ದ ಚೆಂಗಳಕವ್ವನ ಮುಖಗಳನ್ನು ತೆಗೆದುಕೊಂಡು ಬರುತ್ತಾರೆ. ಚೆಂಗಳಕವ್ವನ ಎಲ್ಲ ಕಾರ್ಯಕ್ರಮ ಮುಗಿಯುವವರಗೆ ಊರಿನ ವಾಲೀಕಾರ ಕಾವಲು ಮಾಡುವನು. ಸಾಯಂಕಾಲ ಊರಿನ ಹೆಣ್ಣು ಮಕ್ಕಳು ಕೂಡಿಕೊಂಡು ಚೆಂಗಳಕವ್ವನ ಶೃಂಗಾರ ಮಾಡುವರು.

**ಚೆಂಗಳಕವ್ವನ ಶೃಂಗಾರಕ್ಕೆ ಇಡಿಸುವ ಸಾಮಾನುಗಳು**

ಗುಣಗಡಗಿ ಬೊರಮಾಳ, ಟಿಕ್ಕಿ, ಗುಂಡು ಇತ್ಯಾದಿ ಬಂಗಾರದ ಸಾಮಾನು ಇಡಿಸುವರು. ಜೊತೆಗೆ ಉತ್ತಮವಾದ ಸೀರೆ ಉಡಿಸಿ ದಂಡೆ ಕಟ್ಟುವರು. ಈ ರೀತಿ ಶೃಂಗಾರ ಮಾಡಿ ಮುಗಿದ ನಂತರ ಊರಿನ ಗೌಡರನ್ನು ಊದಿಸುತ್ತ ಬಾರಿಸುತ್ತ ಅಲ್ಲಿಗೆ ಕರೆತಂದು, ಅವರು ಬಂದು ಶೃಂಗಾರಗೊಂಡ ಚೆಂಗಳಕವ್ವನನ್ನು ನೋಡಿದ ತಕ್ಷಣ ಶೃಂಗಾರಕ್ಕೆಂದು ಹಾಕಿದ ಎಲ್ಲ ಒಡವೆಗಳನ್ನು ತೆಗೆದು, ಕಿಟ್ಟಿನಿಂದ ಮಾಡಿದ ಚೆಂಗಳಕವ್ವನ ಮುಖಗಳನ್ನು ಪತ್ತಾರ ಮನೆಗೆ ಕಳಿಸಿ ಅಕಲಿನಿಂದ ಮಾಡಿದ ಚೆಂಗಳಕವ್ವ ಶರೀರದ ಅರಲನ್ನು ಒಬ್ಬರಿಗೊಬ್ಬರು ಒಗೆದು ಅರಲು ಆಡುವರು.

**ಹೊಳಿಗೆ ಮಾಡುವದು ಅಥವಾ ಚೆಂಗಳಕವ್ವ ಊಟ**

ಚೆಂಗಳಕವ್ವನ ಸ್ಥಾಪನೆ ಮಾಡಿ ಊರಿನ ಪದ್ಧತಿಯಂತೆ ಎಲ್ಲ ಕೆಲಸಗಳನ್ನು ಮುಗಿಸಿದ ಮರುದಿವಸ ಊರಿನ ಎಲ್ಲ ಜನರು ತಮ್ಮ ತಮ್ಮ ಮನೆಯಿಂದ ವಿವಿಧ ಭೋಜನವನ್ನು ಮಾಡಿಕೊಂಡು ಹೊಳಿಗೆ ಹೋಗಿ ಅಲ್ಲಿ ನೈವೇದ್ಯ ಮಾಡಿ ತಾವೂ ಭೋಜನ ಮಾಡಿ

ಇತರೆ ಜಾನಪದ ಕ್ರೀಡೆಗಳನ್ನು ಆಡುವರು. ಇದಕ್ಕೆ ಈ ಊರಲ್ಲಿ ಹೋಳಿಗೆ ಮಾಡುವದು ಅಥವಾ ಚೆಂಗಳಕವ್ವನ ಊಟ ಎನ್ನುವರು. ಈ ರೀತಿಯಾಗಿ ಒಟ್ಟು ಐದು ದಿವಸ ಈ ಗ್ರಾಮದಲ್ಲಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವರು.

**ಹೆರಕಲ್ ಚೆಂಗಳಕವ್ವ**

**ಗಿರಿಸಾಗರ :** ಬಾಗಲಕೋಟೆ ಜಿಲ್ಲೆ ಬೀಳಗಿ ತಾಲೂಕಿನಲ್ಲಿ ಬರುವ ಅತಿ ದೊಡ್ಡ ಗ್ರಾಮ ಗಿರಿಸಾಗರ. ಈ ಊರಲ್ಲಿ ಚೆಂಗಳಕವ್ವನ ಹಬ್ಬವನ್ನು (ಸಿರಿಯಾಳ ಸಷ್ಠಿ) ಚೆನ್ನಾಗಿ ಆಚರಣೆ ಮಾಡುತ್ತಾರೆ.

ನಾಗರ ಪಂಚಮಿ ಹುತ್ತ ಮುರಿಯುವ ದಿವಸ ಚೆಂಗಳಕವ್ವ ಮೂರ್ತಿಯನ್ನು ಶ್ರೀ ಗುರು ಸಂಗಮೇಶ್ವರ ದೇವಸ್ಥಾನದಲ್ಲಿ ಸ್ಥಾಪನೆ ಮಾಡುತ್ತಾರೆ. ಪಂಚಮಿಗೆ ಸ್ಥಾಪನೆ, ಅಷ್ಠಮಿಗೆ ಹಾಲೋಕಳಿ, ನವಮಿಗೆ ಹೆಂಡಿ ಓಕುಳಿಗಳನ್ನು ಗ್ರಾಮದ ಪದ್ಧತಿಯಂಯೆ ಊರಿನ ಜನರು ಸೇರಿಕೊಂಡು ಆಚರಿಸುತ್ತಾರೆ.

**ಹೆಂಡಿ ಓಕಳಿ ವಿಶೇಷ**

ಊರಿನ ಎರಡು ಪ್ರತ್ಯೇಕ ಸಮುದಾಯದ ಹೆಣ್ಣು ಮಕ್ಕಳು ಎರಡು ಗುಂಪುಗಳಾಗಿ ಚೆಂಗಳಕವ್ವ ಮೂರ್ತಿ ಸ್ಥಾಪನೆ ಮಾಡಿದ ಶ್ರೀ ಗುರು ಸಂಗಮೇಶ್ವರ ದೇವಸ್ಥಾನದ ಮುಂದೆ ಸಾಯಂಕಾಲ ೬ ಗಂಟೆಗೆ ಹೆಂಡಿ ಓಕಳಿ ಆಡುವರು. ಈ ಎರಡು ತಂಡಗಳಲ್ಲಿ ಗಂಡಸರು ವಿಶೇಷ ವೇಷಭೂಷಣ ಮಾಡಿಕೊಂಡು ಹೆಂಡಿ ಓಕಳಿ ತಂಡದಲ್ಲಿ ಕಾಣಿಸಿಕೊಳ್ಳುವರು. ಸುಮಾರು ಎರಡು ತಾಸುಗಳವರೆಗೆ ನಡೆಯುವ ಹೆಂಡಿ ಓಕಳಿ ನೋಡುಗರಿಗೆ ಮನರಂಜನೆ ನೀಡುತ್ತದೆ. ಪದ್ಧತಿಯಂತೆ ಪ್ರತಿವರ್ಷ ಮಾಡುವ ಕಾರ್ಯಗಳನ್ನು ಆ ಮನೆಯವರೇ ನಡೆಸಿಕೊಂಡು ಹೋಗುವುದು ರೂಢಿಯಲ್ಲಿದೆ. ಹೆಂಡಿ ಓಕಳಿ ಮುಗಿದ ನಂತರ ಸಮೀಪದ ಬಾವಿಗೆ ಹೋಗಿ ಎಲ್ಲರೂ ಸ್ನಾನ ಮಾಡಿಕೊಂಡು ಬರುವರು. ಓಕಳಿ ಆಡಿ ಕೆಳಗೆ ಬಿದ್ದ ಹೆಂಡಿಯನ್ನು ಓಕಳಿ ನೋಡಲು ಬಂದ ಎಲ್ಲ ಜನರು ಸ್ವಲ್ಪ ತೆಗೆದುಕೊಂಡು ಹೋಗಿ ತಮ್ಮ ಮನೆಯ ದೇವರ ಜಗಲಿಯ ಮೇಲಿಟ್ಟು ಪೂಜೆ ಮಾಡುವದು ಈ ಊರ ಪದ್ಧತಿ ಎನ್ನುತ್ತಾರೆ ಈ ಊರಿನ ಹಿರಿಯರಾದ ಶ್ರೀ ಮಲ್ಲಪ್ಪ ಗುನ್ನಿಯವರು. ಬಾವಿಗೆ ಹೋಗಿ ಎಲ್ಲರೂ ಜಳಕ ಮಾಡಿ ಚೆಂಗಳಕವ್ವನ ಮೂರ್ತಿಯನ್ನು ಭವ್ಯ ಮೆರವಣಿಗೆಯೊಂದಿಗೆ ಶ್ರೀ ಸಂಗಮೇಶ್ವರ ದೇವಸ್ಥಾನಕ್ಕೆ ತಂದು ಸ್ಥಾಪನೆ ಮಾಡುವರು.

**ನಾಮಕರಣ ಮಾಡುವುದು**

ಹೆಂಡಿ ಓಕಳಿ ಮುಗಿದ ನಂತರ ಎಲ್ಲರೂ ಸ್ನಾನ ಮಾಡಿ ರಾತ್ರಿ ೭ ಗಂಟೆಯ ಸುಮಾರಿಗೆ ಶ್ರೀ ಸಂಗಮೇಶ್ವರ ದೇವಸ್ಥಾನದಲ್ಲಿ ಊರಿನ ಎಲ್ಲ ಸ್ತ್ರೀಯರು ಸೇರುವರು. ಸೇರಿದ ಎಲ್ಲ ಹೆಣ್ಣು ಮಕ್ಕಳು ಹಾಡುಗಳನ್ನು ಹೇಳುವರು. ಅಂದು ಚೆಂಗಳಕವ್ವನ ಮಗನಿಗೆ ಹೆಸರು ಇಡುವ ಕಾರ್ಯಕ್ರಮ ಅವನೇ "ಚಿಲ್ಲಾಳ". ಸಂಪ್ರದಾಯದಂತೆ ಭಕ್ತಿಯಿಂದ ಎಲ್ಲ ಕಾರ್ಯಕ್ರಮಗಳಲ್ಲಿ ಊರಿನ ಹೆಣ್ಣು ಮಕ್ಕಳು ಭಾಗವಹಿಸುವರು.

**ಬಾಬುಗಳು**

ಗಿರಿಸಾಗರ ಗ್ರಾಮದ ಚೆಂಗಳಾ ದೇವಿಯ ಉತ್ಸವಕ್ಕೆ ಒಟ್ಟು ನಾಲ್ಕು ಜನರ ಬಾಬುಗಳು ಇದ್ದು, ಈ ಬಾಬದವರು ಬರುವವರೆಗೆ ಯಾವುದೇ ಕಾರ್ಯಕ್ರಮಗಳು ನಡೆಯುವುದಿಲ್ಲ. ಬಾಬದ ಮನೆಗಳು ಯಾವುವೆಂದರೆ ದೇಸಾಯಿಯವರ ಬಾಬ, ಕೋರಿ ಶೆಟ್ಟರ ಬಾಬ, ದಿನ್ನಿಮನಿ ಚೌಡಪ್ಪನವರ ಬಾಬ, ತಿರಕಪ್ಪ ದ್ಯಾಮಗೊಳ ಬಾಬ.

**ಪೂಜೆ ಪದ್ಧತಿ**

ಚೆಂಗಳಕವ್ವ ಸ್ಥಾಪನೆಯಾದ ದಿನದಿಂದ ಹಿಡಿದು ಹೊಳಿಗೆ ಹೋಗುವ ತನಕ ಎಲ್ಲ ಪೂಜೆ ಪುನಸ್ಕಾರಗಳನ್ನು ಗ್ರಾಮದ ಮಠಪತಿ ನೆರವೇರಿಸಿಕೊಂಡು ಹೋಗುವರು. ಪ್ರತಿದಿನ ಸಾಯಂಕಾಲ ಊರಿನ ಹೆಣ್ಣು ಮಕ್ಕಳು ಕೂಡಿಕೊಂಡು ಹಾಡು ಹೇಳುವರು.

**ನೈವೇದ್ಯ**

ಚೆಂಗಳಕವ್ವ ಪೂಜೆಯ ಎಲ್ಲ ಜವಾಬ್ದಾರಿಯನ್ನು ಊರಿನ ಮಠಪತಿಯವರು ನಿರ್ವಹಿಸಿದರೆ ಊರಿನ ಭಕ್ತಿ ಸಮೂಹ ಅವರ ಅನುಕೂಲಕ್ಕೆ ತಕ್ಕಂತೆ ಕಡಬು, ಹೊಳಿಗೆ, ಹುಗ್ಗಿ ಇತ್ಯಾದಿ ನೈವೇದ್ಯವನ್ನು ತಂದು ಚೆಂಗಳಾ ದೇವಿಗೆ ನೈವೇದ್ಯ ಸಮರ್ಪಣೆ ಮಾಡುವರು.

**ಉಡಿ ತುಂಬುವ ಸಾಮಾನು**

ಸ್ತ್ರೀ ದೇವತೆಯಾದ ಚೆಂಗಳಕವ್ವಗೆ ಉಡಿ ತುಂಬುವುದು ಪದ್ಧತಿ ಇದೆ. ಆ ಪ್ರಕಾರ ಇಲ್ಲಿ ಎಷ್ಟು ದಿನ ಚೆಂಗಳಕವ್ವನ ಸ್ಥಾಪನೆ ಮಾಡುತ್ತಾರೆ ಅಷ್ಟು ದಿನ ರಾತ್ರಿ ಊರಿನ ಹೆಣ್ಣು ಮಕ್ಕಳು ಅಕ್ಕಿ, ಕೊಬ್ಬರಿ ಬಟ್ಟಲ, ಅಡಿಕೆ, ಎಲೆ, ಉತ್ತುತ್ತಿ ಇತ್ಯಾದಿ ಸಾಮಾನುಗಳನ್ನು ತಂದು ಉಡಿ ತುಂಬಿ ಹಾಡು ಹೇಳಿ ಆರತಿ ಮಾಡಿ ಹೋಗುವುದು ಇಲ್ಲಿಯ ಪದ್ಧತಿಯಾಗಿದೆ.

**ಸಂತಾನ ದೇವತೆಯಾಗಿ ಚೆಂಗಳಕವ್ವ**

ಜನಪದರ ಬದುಕಿನಲ್ಲಿ ಹಬ್ಬ ಹರಿದಿನಗಳಿಗೆ ಕೊರತೆ ಇಲ್ಲ. ಚೆಂಗಳಕವ್ವ ಉತ್ಸವದಲ್ಲಿ ಚೆಂಗಳಕವ್ವನಿಗೆ ಭಕ್ತಿಯಿಂದ ಬೇಡಿಕೊಂಡ ಮಹನೀಯರಿಗೆ ಹಲವಾರು ಇಷ್ಟಾರ್ಥಗಳು ಸಿದ್ಧಿಯಾಗಿವೆ.

ಮದುವೆಯಾಗಿ ಬಹಳ ದಿನಗಳಿಂದ ಸಂತಾನ ಪ್ರಾಪ್ತಿಯಾಗದ ಹೆಣ್ಣು ಮಕ್ಕಳು ಚೆಂಗಳಕವ್ವನ ಮಗನ ಹೆಸರು ಇಡುವ ದಿವಸ, ಮಠದಲ್ಲಿ ಕಟ್ಟಿದ ತೊಟ್ಟಲ ಕೆಳಗೆ ಕುಳ್ಳಿರಿಸಿ ಭಕ್ತಿಯಿಂದ ಬೇಡಿಕೊಂಡರೇ, ಒಂದು ವರ್ಷ ತುಂಬುವುದರೊಳಗೆ ಸಂತಾನ ಪ್ರಾಪ್ತಿಯಾಗುತ್ತದೆ ಎಂಬುದು ಇಲ್ಲಿಯ ಜನರ ನಂಬಿಕೆ. ಆ ನಂಬಿಕೆಯ ಪ್ರಕಾರ ಹಲವಾರು ಜನರಿಗೆ ಸಂತಾನವಾದ ಉದಾಹರಣೆಗಳು ಇವೆ ಎಂದು ಊರಿನ ಜನ ಹೇಳುತ್ತಾರೆ.

**ವಿಸರ್ಜನೆ**

ಗಿರಿಸಾಗರ ಗ್ರಾಮದಲ್ಲಿ ನಾಗರ ಪಂಚಮಿ ಆಧಾರದ ಮೇಲೆ ಚೆಂಗಳಕವ್ವನನ್ನು ಸ್ಥಾಪನೆ ಮಾಡುತ್ತಾರೆ. ರವಿವಾರ ಓಕಳಿ, ಸೋಮವಾರ ಹೆಂಡಿ, ಮಂಗಳವಾರ ಹೊಳಿಗೆ ಕಳಿಸುವುದು. ಚೆಂಗಳಕವ್ವನ ಮಗನ ಹೆಸರು ಇಟ್ಟ ಮರುದಿನ ಸಾಯಂಕಾಲ ನಾಲ್ಕು ಗಂಟೆಗೆ ಊರಿನ ಎಲ್ಲ ಹೆಣ್ಣು ಮಕ್ಕಳು ಸೇರಿಕೊಂಡು ವಿವಿಧ ಭೋಜನಗಳನ್ನು ಮಾಡಿಕೊಂಡು, ಕೃಷ್ಣಾ ತೀರಕ್ಕೆ ಹೋಗಿ ಚೆಂಗಾಳ ದೇವಿಗೆ ನೈವೇದ್ಯ ಮಾಡಿ ಭಕ್ತಿಯಿಂದ ಬೇಡಿಕೊಂಡು, ತಾವು ಊಟ ಮಾಡಿ, ವಿವಿಧ ಜನಪದ ಆಟಗಳನ್ನು ಆಡಿ ತಾವು ಖುಸಿಪಟ್ಟು ಇತರರನ್ನು ಖುಸಿಗೊಳಿಸಿ, ವರ್ಷದ ಪದ್ಧತಿಯಂತೆ ಚೆಂಗಳಕವ್ವನ ಮೂರ್ತಿಯುನ್ನು ಕೃಷ್ಣಾ ನದಿಯಲ್ಲಿ ವಿಸರ್ಜನೆ ಮಾಡಿ ಸಾಯಂಕಾಲ ಎಲ್ಲರೂ ತಮ್ಮ ಮನೆಗೆ ಮರಳುತ್ತಾರೆ.

**ಚೆಂಗಳಕವ್ವನ ಮೂರ್ತಿ**

ಈ ಗ್ರಾಮದಲ್ಲಿ ಚೆಂಗಳಕವ್ವನ ಮೂರ್ತಿಯನ್ನು ಈ ಮೊದಲು ಊರಿನ ಕುಂಬಾರರಿಂದ ಅರಲಿನಿಂದ ಮಾಡಿಸುತ್ತಿದ್ದರು. ಅರಲಿನಿಂದ ಮಾಡಿದ ಮೂರ್ತಿಯನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಹೊಳೆಯಲ್ಲಿ ಬಿಡುತ್ತಿದ್ದರು. ಇತ್ತೀಚೆಗೆ ಕಟ್ಟಿಗೆಯಿಂದ ಮೂರ್ತಿ

ಮಾಡಿಸಿದ್ದು, ಈ ಮೂರ್ತಿಯನ್ನು ಗೋಕಾಕದ ಬಡಿಗೇರರು ಮಾಡಿದ್ದಾರೆ ಎನ್ನುತ್ತಾರೆ ಊರಿನ ಪ್ರಮುಖರು. ವಿಸರ್ಜನೆಯ ದಿವಸ ಹೊಳಿಗೆ ಹೋದ ನಂತರ, ಎಲ್ಲ ಪೂಜೆ ಪುನಸ್ಕಾರಗಳನ್ನು ಮುಗಿಸಿದ ನಂತರ, ಮಠಪತಿ ಚೆಂಗಳಕವ್ವ ಮೂರ್ತಿಯನ್ನು ಅರಬಿಯಲ್ಲಿ ಕಟ್ಟಿ ತಂದು ಗುಡಿಯಲ್ಲಿ ಇಡುತ್ತಾನೆ. ಇಲ್ಲಿಗೆ ಚೆಂಗಳಕವ್ವನ ಜಾತ್ರಿ ಮುಗಿಯಿತು ಎನ್ನುತ್ತಾರೆ ಊರಿನ ಹಿರಿಯರಾದ ಶ್ರೀ ಬಾಲಪ್ಪ ಸನ್ನವರ ಮತ್ತು ಶ್ರೀ ರುದ್ರಪ್ಪ ವನರೊಟ್ಟಿ ಇವರು.

**ನವಲಗುಂದ**

ನವಲಗುಂದ ಧಾರ್ಮಿಕ ಕ್ಷೇತ್ರದಲ್ಲಿ ಹೆಸರು ಮಾಡಿದ ಒಂದು ನಗರ. ಈ ಊರಿನಲ್ಲಿ ಒಟ್ಟು ಐದು ಕಡೆ ಚೆಂಗಳಕವ್ವನ ಆಚರಣೆಯನ್ನು ಬಹು ವಿಜೃಂಭಣೆಯಿಂದ ಅವರವರ ಓಣಿಗಳಲ್ಲಿ ಆಚರಿಸುವರು. ಚೆಂಗಳಕವ್ವನ ಜಾತ್ರೆಯನ್ನು ಮಾಡುವ ಓಣಿಯ ಹೆಸರುಗಳು ಕೆಳಗಿನಂತಿದೆ.

೧. ಹಳ್ಳದ ಓಣಿ ಚೆಂಗಳಕವ್ವ
೨. ರಾಮಲಿಂಗನ ಓಣಿ ಚೆಂಗಳಕವ್ವ
೩. ಗೌಡರ ಓಣಿ ಚೆಂಗಳಕವ್ವ
೪. ಗಡ್ಡಿಯಾರ ಓಣಿ ಚೆಂಗಳಕವ್ವ
೫. ಹಳಿಪ್ಯಾಟಿ ಚೆಂಗಳಕವ್ವ (ಮೂಲ ಚೆಂಗಳಕವ್ವ)

ಮೊಟ್ಟ ಮೊದಲು ಊರಿನ ಎಲ್ಲ ಜನರು ಕೂಡಿಕೊಂಡು ಹಳಿಪ್ಯಾಟಿಯಲ್ಲಿ ಚೆಂಗಳಕವ್ವನನ್ನು ಸ್ಥಾಪನೆ ಮಾಡುತ್ತಿದ್ದರು. ಈಗ ಊರು ಬೆಳೆದಂತೆ ಜನರು ತಮ್ಮ ಓಣಿಗೊಂದರಂತೆ ಚೆಂಗಳಕವ್ವನ ಆಚರಣೆ ಮಾಡುತ್ತಾರೆ ಎನ್ನುತ್ತಾರೆ ಹಿರಿಯರಾದ ಸೋಮಣ್ಣ ಕಲ್ಲಪ್ಪ ಹಳ್ಳದವರು.

**ಚೆಂಗಳಕವ್ವನ ಸ್ಥಾಪನೆ**

ಪ್ರತಿ ಶ್ರಾವಣದಲ್ಲಿ ಬರುವ ಸಣ್ಣ ಸೋಮವಾರ ದಿವಸ ಬೆಳಗಿನ ೧೧ ಗಂಟೆಗೆ ಚೆಂಗಳಕವ್ವ ಮೂರ್ತಿಯನ್ನು ಗುಡಿಯಲ್ಲಿ ಸ್ಥಾಪನೆ ಮಾಡುವರು. ಬೆಳಗಿನಿಂದ ರಾತ್ರಿಯವರೆಗೆ ಹಾಡುವುದು, ಉಡಿ ತುಂಬುವುದು ಇತ್ಯಾದಿ ಕಾರ್ಯಕ್ರಮಗಳನ್ನು ಓಣಿಯ ಎಲ್ಲ ಹೆಣ್ಣು ಮಕ್ಕಳು ನಡೆಸಿಕೊಂಡು ಬರುವರು. ಚೆಂಗಳಕವ್ವನ ಸ್ಥಾಪನೆ ಮಾಡುವ ಸೋಮವಾರ ದಿವಸ ಶ್ರೀ ಬಿ.ಎಂ.ಪಾಟಿಲ ಇವರ ಮನೆಯಿಂದ ಆರತಿಯೊಂದಿಗೆ ಚೆಂಗಳಕವ್ವನ ಗುಡಿಯಲ್ಲಿ ತಂದು ಇಡುವರು. ಊರಿನ ಹಳಬನು ಸಹ ತನ್ನ ಮನೆಯಲ್ಲಿದ್ದ ಹತಾರನ್ನು ತಂದು ಸ್ಥಾಪನೆಯ ದಿವಸ ಗುಡಿಯಲ್ಲಿ ಇಡುವನು.

ಮೊದಲಿಗೆ ಚೆಂಗಳಕವ್ವನನ್ನು ಅವರಾದಿಯವರ ಮನೆಯಲ್ಲಿ ಸ್ಥಾಪನೆ ಮಾಡುತ್ತಿದ್ದು ನಂತರ ಹನುಮಂತದೇವರ ಗುಡಿಯಲ್ಲಿ ಸ್ಥಾಪನೆ ಮಾಡುತ್ತಾ ಬರುತ್ತಿದ್ದಾರೆ. ನಂತರ ಕೆಲವು ದಿವಸ ಓಣಿಯಲ್ಲಿ ಹಂದರಾ ಹಾಕಿ ಚೆಂಗಳಕವ್ವ ಸ್ಥಾಪನೆ ಮಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ನವಲಗುಂದದ ಹೆಣ್ಣುಮಗಳು ಶ್ರೀಮತಿ ಶಂಕ್ರೆವ್ವ ಯಲ್ಲಪ್ಪ ಶಾನವಾಡ ಸಾ. ಬಲತವಾಡಿ ಇವರು ಚೆಂಗಳಕವ್ವನ ಗುಡಿಯನ್ನು ಕಟ್ಟಿಸಿದ್ದಾರೆ.

ಶ್ರಾವಣ ಮಾಸದ ಉದ್ದಕ್ಕೂ ಬರುವ ಪ್ರತಿ ಸೋಮವಾರ ದಿವಸ ಈ ಗುಡಿಯಲ್ಲಿ ಚೆಂಗಳಕವ್ವನ ಸ್ಥಾಪನೆ ಮಾಡಿ, ಓಣಿಯ ಎಲ್ಲ ಜನರು ಭಯ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಚೆಂಗಳಕವ್ವ ಈ ಗ್ರಾಮದಲ್ಲಿ ಭಾವೈಕ್ಯತೆಯ ದೇವತೆ ಎಂದು ಹೇಳಬಹುದು. ನವಲಗುಂದ ಮುಸ್ಲಿಂ ಬಾಂಧವರ ಹೆಣ್ಣು ಮಗಳನ್ನು ಬಾಗಲಕೋಟೆ ತಾಲೂಕಿನ ಶಿರೂರಿಗೆ ಮದುವೆ ಮಾಡಿ ಕೊಡಲಾಗಿತ್ತು. ಬಹಳ ದಿನಗಳಿಂದ ಸಂತಾನ ಪ್ರಾಪ್ತಿಯಾಗಿರಲಿಲ್ಲ. ಆ ಹೆಣ್ಣು ಮಗಳು ಬಂದು ಭಕ್ತಿಯಿಂದ ಬೇಡಿಕೊಂಡಾಗ, ಮುಂದಿನ ವರ್ಷ

ಬರುವುದರೊಳಗೆ ಸಂತಾನ ಭಾಗ್ಯ ಲಭಿಸಿತು ಎಂದು ಹೇಳುತ್ತಾಳೆ ಅವರ ತಾಯಿ ಶ್ರೀಮತಿ ಮೆರಣಬಿ ಕುಂದಗೋಳ. ಇನ್ನು ಹಲವಾರು ಉದಾಹರಣೆಗಳಿವೆ ಅನ್ನುತ್ತಾರೆ ಓಣಿಯ ಹಿರಿಯರು. ಸೋಮವಾರ ರಾತ್ರಿ ಕಾರ್ಯಕ್ರಮಗಳು ಮುಗಿದ ನಂತರ ಚೆಂಗಳಕವ್ವನ ಮೂರ್ತಿಯನ್ನು ಶ್ರೀ ವೆಂಕಟೇಶ್ವರ ಗುಡಿಯಲ್ಲಿ ತಂದು ಇಡುತ್ತಾರೆ.

ಕೊನೆಯ ಶ್ರಾವಣ ಸೋಮವಾರ ದಿವಸ ಮೆರವಣಿಗೆ ಮಾಡುತ್ತಾ ಕೌಲಪೇಟೆಯ ಶೆಟ್ಟರ ಮನಿಗೆ ಹೋಗಿ ಉಡಿ ತುಂಬಿಸಿಕೊಂಡು ಬನ್ನಿ ಗಿಡಕ ಪೂಜೆ ಮಾಡಿಕೊಂಡು ಬ್ಯಾಳಿಯವರ ಮನೆಯಲ್ಲಿ ಶ್ರಾವಣ ಮಾಸ ಪರ್ಯಂತ ಪೂಜಾ ಕಾರ್ಯಕ್ರಮ ನಡೆಯುವುದು. ಶ್ರಾವಣದ ಕಡೆಯ ಸೋಮವಾರ ಮುಗಿದ ನಂತರ ರಾತ್ರಿ ಚೆಂಗಳಕವ್ವನ ಮೂರ್ತಿಯನ್ನು ದ್ಯಾಮವ್ವನ ಗುಡಿಯಲ್ಲಿ ಪೆಟ್ಟಿಗೆಯಲ್ಲಿ ಹಾಕಿ ಇಡುತ್ತಾರೆ. ನಮ್ಮ ತಾತ ಮುತ್ತಾತರಿಂದ ಈಕೆ ಒಬ್ಬಾಕೆ ಚೆಂಗಳಕವ್ವ ಇನ್ನುವರೆಗೆ ಒಮ್ಮೆಯೂ ಬಣ್ಣ ಮಾಡಿಸಲ್ಲಾ ನೋಡ್ರಿ ಅಂತಾರೆ ಓಣಿಯ ಜನರು. ಓಣಿಯ ಎಲ್ಲ ಜನರು ಕೂಡಿಕೊಂಡು ತಮ್ಮ ಅನುಕೂಲಕ್ಕೆ ತಕ್ಕಂತೆ ದೇಣಿಗೆ ಕೂಡಿಸಿ ಎಲ್ಲ ಜಾತ್ರೆಯನ್ನು ನೆರವೇರಿಸುವರು.

ಶ್ರಾವಣ ಮಾಸ ಪರ್ಯಂತ ನಡೆಯುವ ಶಿವಶರಣೆ ಚೆಂಗಳಕವ್ವನ ಪೂಜೆ ಹಾಗೂ ಇನ್ನಿತರ ಕಾರ್ಯಕಲಾಪಗಳನ್ನು ಶ್ರೀಮತಿ ಚೆನಬಸಮ್ಮ ನಂದಿಕೋಲ ಮಠ ಇವರು ನೆರವೇರಿಸಿಕೊಂಡು ಹೋಗುವರು. ಓಣಿಯಲ್ಲಿ ಕೂಡಿದ ಹಣದಿಂದ ಎಲ್ಲರ ಬಾಬು ಮತ್ತಿತರ ಖರ್ಚುಗಳನ್ನು ನೆರವೇರಿಸುವರು. ಸಂಪೂರ್ಣ ಚೆಂಗಳಕವ್ವನ ಆಚರಣೆಯನ್ನು ಓಣಿಯ ಎಲ್ಲ ಹೆಣ್ಣು ಮಕ್ಕಳು ನೆರವೇರಿಸಿಕೊಂಡು ಹೋಗುವರು.

**ಕೃಷ್ಣಾಪೂರ (ಕೊಪ್ಪ)**

ಕೃಷ್ಣಾಪೂರ (ಕೊಪ್ಪ) ಗ್ರಾಮ ರೋಣ ತಾಲೂಕಿನಲ್ಲಿ ಬರುವ ಒಂದು ಗ್ರಾಮ. ಈ ಗ್ರಾಮದಲ್ಲಿ ಶಿವಶರಣೆ ಚೆಂಗಳಕವ್ವ ಜಾತ್ರೆಯನ್ನು ಬಹು ವಿಜೃಂಭಣೆಯಿಂದ ನೆರವೇರಿಸುವರು. ಕೃಷ್ಣಾಪೂರ ಗ್ರಾಮದಲ್ಲಿ ಚೆಂಗಳಕವ್ವನ ಮೂರ್ತಿ ಸ್ಥಾಪನೆಯನ್ನು ನಾಗರ ಪಂಚಮಿಯ ಕೆರೆಕಟ್ಟಂಬಲಿ ದಿವಸ ಮಾಡುವರು. ಪ್ರತಿ ಸೋಮವಾರ ದಿವಸ ಊರಿನ ಎಲ್ಲ ಜನರು ಸಾಯಂಕಾಲ ಕೂಡಿ ಹಾಡುವುದು, ಭಜನೆ ಹಾಘೂ ಉಡಿ ತುಂಬುವ ಕಾರ್ಯಕ್ರಮವನ್ನು ಮಾಡುವರು. ಇನ್ನುಳಿದ ದಿವಸದಲ್ಲಿ ಎಲ್ಲ ಕಾರ್ಯಗಳನ್ನು ಮನೆಯ ಸ್ತ್ರೀಯರು ನಡೆಸಿಕೊಂಡು ಹೋಗುವರು. ಶ್ರೀ ಹನುಮಂತಪ್ಪ ದೊಡಮನಿ ಇವರ ಮನೆಯಲ್ಲಿ ಸ್ಥಾಪಿಸಿದ ಚೆಂಗಳಕವ್ವ ಎಲ್ಲ ಪೂಜೆ ಪುನಸ್ಕಾರಗಳನ್ನು ಇವರ ಶ್ರೀಮತಿಯಾದ ಪಾರ್ವತೆವ್ವ ಹಣಮಂತಪ್ಪ ದೊಡಮನೆ ನೆರವೇರಿಸಿಕೊಂಡು ಬರುವರು. ಚೆಂಗಳಕವ್ವನ ವಿಸರ್ಜನೆಯ ದಿವಸ ಊರಿನ ಜಂಗಮರನ್ನು ಮನೆಗೆ ಕರೆದು ಪ್ರಸಾದ ಮಾಡಿಸಿ ದಕ್ಷಿಣೆ ಕೊಟ್ಟು ನಮಸ್ಕರಿಸುವರು. ಊರಿನ ಎಲ್ಲ ಜನರು ಕೂಡಿಕೊಂಡು ಶ್ರಾವಣ ಕೊನೆಯ ಸೋಮವಾರ ದಿವಸ ಭವ್ಯ ಮೆರವಣಿಗೆಯೊಂದಿಗೆ ಸಮೀಪದ ಬಾವಿಗೆ ಹೋಗಿ ಪೂಜೆ ಸಲ್ಲಿಸುವರು. ಅಲ್ಲಿಗೆ ಚೆಂಗಳಕವ್ವನ ಕಾರ್ಯಕ್ರಮ ಮುಕ್ತಾಯವಾಗುವುದು.

**ಯಾದವಾಡ**

ಬೆಳಗಾಂವಿ ಜಿಲ್ಲೆ ಗೋಕಾಕ ತಾಲೂಕಿನಲ್ಲಿ ಬರುವ ಯಾದವಾಡ ಗ್ರಾಮ ಜಾನಪದ ಕ್ಷೇತ್ರಕ್ಕೆ ತನ್ನದೇ ಆದಂತ ಹೆಸರು ಮಾಡಿದ ಊರು. ಈ ಗ್ರಾಮದಲ್ಲಿ ಹುಟ್ಟಿ ಬೆಳೆದ ಹಲವಾರು ಗಣ್ಯ ಮಾನ್ಯ ಕಲಾವಿದರು, ವಿದ್ವಾಂಸರು ಹೆಸರು ಮಾಡಿ ಈ ಊರಿನ ಹೆಸರು ಅಜರಾಮರವಾಗಿ ಉಳಿಯುವಂತೆ ಮಾಡಿದ್ದಾರೆ. ಇಂಥ ಪ್ರಸಿದ್ಧ ಊರಿನಲ್ಲಿ ಶಿವಶರಣೆ ಚೆಂಗಳಕವ್ವನ ಆಚರಣೆಯನ್ನು ಅರ್ಥಪೂರ್ಣವಾಗಿ ಮಾಡುತ್ತಾರೆ.

ಪಂಚಮಿ ವರ್ಷ ತೊಡಕಿನ ದಿವಸ ಮಧ್ಯಾಹ್ನ ಮೂರು ಗಂಟೆಗೆ ಶ್ರೀ ಮಾರುತೇಶ್ವರ ದೇವಸ್ಥಾನ (ಕಾಮನಕಟ್ಟಿ ಓಣಿ) ದಲ್ಲಿ ಚೆಂಗಳಕವ್ವನ ಮೂರ್ತಿಯನ್ನು ಸ್ಥಾಪನೆ ಮಾಡುವರು. ಊರಿನ ಶ್ರೀ ಬಸವನಗೌಡ ಭೀಮನಗೌಡ ಪಾಟೀಲ ಇವರ ಮನೆಯಿಂದ

ಮೆರವಣಿಗೆಯಲ್ಲಿ ತಂದು ಸ್ಥಾಪನೆ ಮಾಡುವರು. ಚೆಂಗಳಕವ್ವನ ಮೂರ್ತಿಯ ಎಲ್ಲ ಶೃಂಗಾರವನ್ನು ಶ್ರೀ ಬಸವನಗೌಡ ಪಾಟೀಲರು ನೆರವೇರಿಸುವರು. ಓಣಿಯ ಜನರೆಲ್ಲಾ ಪಟ್ಟಿ ಕೂಡಿಸಿ ಕುದುರೆ ಸೋಗು ಹಾಕುವರು. ಹಾಗೂ ಹಲವಾರು ಜಾನಪದ ಕ್ರೀಡೆಗಳನ್ನು ಆಡುವರು.

ಪಂಚಮಿ ಹಬ್ಬಕ್ಕೆ ಹೆಣ್ಣು ಮಕ್ಕಳು ಗಂಡನ ಮನೆಯಿಂದ ತವರು ಮನೆ ಬರುವುದು ಹಿಂದಿನಿಂದಲೂ ನಡೆದು ಬಂದ ಪದ್ಧತಿ. ಆ ಪ್ರಕಾರ ಊರಿನ ಹೆಣ್ಣು ಮಕ್ಕಳು ವರ್ಷ ತೊಡಕದ ದಿವಸ ಚೆಂಗಳಕವ್ವನ ಆಚರಣೆಯನ್ನು ಉತ್ತಮವಾಗಿ ಆಚರಿಸುತ್ತಾರೆ. ಚೆಂಗಳಕವ್ವನ ಸ್ಥಾಪನೆ ಮಾಡಿ ಎಲ್ಲರೂ ಹಾಡು ಹೇಳುವರು ಪೂಜೆ ಮಾಡುವರು. ಓಣಿಯ ಜನರು ನೈವೇದ್ಯ ತಂದು ಅರ್ಪಣೆ ಮಾಡುವರು. ಊರಿನ ಗೌಡರು ಉಡಿ ತುಂಬಿಸಿ ಆರತಿ ಮುಂತಾದ ಬಾಬುಗಳನ್ನು ಗೌಡರು ನೆರವೇರಿಸಿಕೊಂಡು ಹೋಗುತ್ತಾರೆ.

(೨)

**ಚೆಂಗಳಕವ್ವ ಮೂರ್ತಿ**

ಶ್ರೀ ಬಸವನಗೌಡ ಭೀಮನಗೌಡ ಪಾಟೀಲ ಇವರ ಪೂರ್ವಜರು ಮೊದಲು ರಟ್ಟೆನಿಂದ ಮೂರ್ತಿ ಮಾಡಿಸಿದ್ದರು. ಕೆಲವು ವರ್ಷಗಳು ಕಳೆದ ನಂತರ ಈ ಗೌಡರು ಕಟ್ಟಿಗೆಯಿಂದ ಮೂರ್ತಿ ಮಾಡಿಸಿದ್ದಾರೆ. ಇದೇ ಊರಿನ ಶ್ರೀ ಶಂಕ್ರಪ್ಪ ಬಡಿಗೇರ ಈ ಮೂರ್ತಿ ತಯಾರಿಸಿದ್ದಾರೆ. ಮನೆಯ ಹಿರಿಯ ಗೌಡಶ್ಯಾನಿ ಶ್ರೀಮತಿ ಯಲ್ಲವ್ವ ಭೀಮನಗೌಡ ಪಾಟೀಲ ನಮ್ಮ ಕಾಲ ಕೀರ್ತಿಲೆ ಬಿದಿರಿನಿಂದ ಎರಡು ಮಂಟಪ ಮಾಡಿಸಿದ್ದೇವೆ. ಆ ಮಂಟಪದಲ್ಲಿ ಚೆಂಗಳಕವ್ವ ಕುಳ್ಳಿರಿಸಿ ಕಾರ್ಯಕ್ರಮ ಮಾಡುತ್ತಾರೆ. ಕಾರ್ಯಕ್ರಮಕ್ಕೆ ಬೇಕಾದ ಎಲ್ಲ ಸಲಕರಣೆಗಳನ್ನು ಓಣಿಯ ಜನರು ಕೂಡಿಕೊಂಡು ಮಾಡಿಕೊಳ್ಳುತ್ತಾರೆ.

**ಚೆಂಗಳಕವ್ವನ ಶೃಂಗಾರಕ್ಕೆ ಪಂಚೇರ ಬಂಗಾರ**

ಚೆಂಗಳಕವ್ವನ ಶೃಂಗಾರ ಮಾಡುವುದಕ್ಕಾಗಿ ಶ್ರೀ ಬಸವನಗೌಡ ಭೀಮನಗೌಡ ಪಾಟೀಲ ಪೂರ್ವಜರು ಪಂಚೇರಗಟ್ಟಲೇ ಬಂಗಾರ ಚೆಂಗಳಕವ್ವನ ಮೈ ಮ್ಯಾಲೆ ಹಾಕುತ್ತಿದ್ದರು ಎಂದು ಹೇಳುವಾಗ, ಗೌಡಶ್ಯಾನಿಯವರ ಕಣ್ಣಲ್ಲಿ ಆನಂದಬಾಷ್ಪ ಬರುತ್ತಿದ್ದವು. ಅವ್ರು ಅಷ್ಟ ಮಾಡಿದರು, ನಾವು ಇಷ್ಟ ಮಾಡಕೊಂತ ಹೊಂಟೇವು, ದೇವು ಚಂದ ನೆಡಿಸ್ಯಾನ ಎಂದು ಖುಷಿಯಿಂದ ಹೇಳಿದಳು. ಗೌಡಶ್ಯಾನಿ ಪದ್ಧತಿಯಂತೆ ಎಲ್ಲ ಕಾರ್ಯಕ್ರಮಗಳು ಮುಗಿದ ನಂತರ ಚೆಂಗಳಕವ್ವನ ಮೂರ್ತಿಯನ್ನು ಶ್ರೀ ಮಾರುತೇಶ್ವರ ದೇವಸ್ಥಾನದಿಂದ ಮೆರವಣಿಗೆಯಲ್ಲಿ ತಂದು ಗೌಡರ ಮನೆಯಲ್ಲಿ ಇಡುವರು.

**ಚೆಂಗಳಕವ್ವ ಊಟ**

ಕರೆಕಟ್ಟಂಬಲಿ ದಿವಸ ಇಡಿಯಾಗಿ ಚೆಂಗಳಕವ್ವನ ಆಚರಣೆಯಲ್ಲಿ ಕಾಲ ಕಳೆದ ಈ ಗ್ರಾಮದ ಜನರು ಮರುದಿವಸ ಸಾಯಂಕಾಲ ಊರಿನ ಸಮೀಪವಿರುವ ಕೆರೆಗೆ ಬುತ್ತಿ ಕಟ್ಟಿಕೊಂಡು ಹೋಗಿ ಪೂಜೆ ಸಲ್ಲಿಸಿ ಊರಿನ ಎಲ್ಲರೂ ಕೂಡಿ ಊಟ ಮಾಡಿ ಖುಷಿಪಡುವರು. ಚೆಂಗಳಕವ್ವನ ಆಚರಣೆಗೆ ಹೆಚ್ಚು ಜನ ಹೆಣ್ಣು ಮಕ್ಕಳು ಇರುವುದರಿಂದ ಕೆರೆಯ ಊಟಕ್ಕೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಇರುತ್ತಾರೆ. ಇದಕ್ಕೆ ಈ ಊರಲ್ಲಿ ಚೆಂಗಳಕವ್ವ ಊಟ ಎಂದು ಕರೆಯುತ್ತಾರೆ.

**ಹುನಗುಂಡಿ ಚೆಂಗಳಕವ್ವ**

ಶ್ರೀ ಸಂಗನಗೌಡ, ಬಸವನಗೌಡ, ದೊಡ್ಡಗೌಡರ ಇವರು ಮನೆಯಲ್ಲಿ ಕರಿಕಟ್ಟಂಬಲಿ ದಿವಸ ಚೆಂಗಳಕವ್ವನ ಸ್ಥಾಪನೆ ಮಾಡುವರು. ಬೆಳಗಿನ ಒಂಬತ್ತು ಗಂಟೆಗೆ ಸ್ಥಾಪನೆ ಮಾಡುವರು. ಅಂದು ಪೂರ್ತಿಯಾಗಿ ಊರಿನ ಜನರೆಲ್ಲ ಭಾಗವಹಿಸಿ ಕಾರ್ಯಕ್ರಮ ನಡೆಸಿಕೊಂಡು ಬರುವರು. ಸಾಯಂಕಾಲ ಐದು ಗಂಟೆಗೆ ಚೆಂಗಳಕವ್ವನನ್ನು ಎತ್ತಿನ ಬಂಡಿಯಲ್ಲಿ ಮೆರವಣಿಗೆ ಮಾಡುತ್ತಾ ಹೊಳಿಗೆ ಹೋಗುವರು. ಎಲೆ ಚಟ್ಟಿಕಟ್ಟಲು ಊರಿನ ಹಿರಿಯರು ೨೫೦ ಎಲೆ ಕೊಡುವರು ಹಾಗೂ ಗುಳ್ಳವ್ವನ ಆಚರಣೆಯವರು ಎಲಿ ಪೂಜೆ ಮಾಡಿಸುವರು. ಭಜನೆ, ಡೊಳ್ಳು, ಆರುತಿ, ಬಾಜಾ ಭಜಂತ್ರಿಯವರೊಂದಿಗೆ ಮೆರವಣಿಗೆಯಲ್ಲಿ ಹಳ್ಳಕ್ಕೆ ಹೋಗುವರು. ಅಲ್ಲಿ ಮಣ್ಣಿನ ಬಸವಣ್ಣನ ಮಾಡಿ ಊರಿನಿಂದ ತಂದ ಸಸಿಗಳನ್ನು ಅಲ್ಲಿ ಇಟ್ಟು ಪೂಜೆ ಮಾಡುವರು. ಈ ಆಚರಣೆಯ ಎಲ್ಲ ಖರ್ಚುಗಳನ್ನು ಮನೆಯವರು ವಹಿಸಿಕೊಳ್ಳುವರು. ಹೊಳಿಗೆ ಹೋಗುವ ದಿವಸ ಹೊಳಿಗೆ ನೈವೇದ್ಯ ಮಾಡಿ ಜಂಗಮರಿಗೆ ಪ್ರಸಾದ ಮಾಡಿಸಿ ದಕ್ಷಿಣೆ ಕೊಟ್ಟು ನಮಸ್ಕಾರ ಮಾಡುವರು. ಕರಿಕಟ್ಟಂಬಲಿ ಮಂಗಳವಾರ ಮತ್ತು ಶುಕ್ರವಾರ ದಿವಸ ಚೆಂಗಳಕವ್ವನನ್ನು ಹೊಳಿಗೆ ಕಳಿಸುವುದಿಲ್ಲ. ಮರುದಿವಸ ಕಳಿಸುತ್ತಾರೆ. ಊರಿನ ಜನರೆಲ್ಲರೂ ಬಂದು ಉಡಿಯಕ್ಕಿ ಹಾಕುವುದು ನೈವೇದ್ಯ ಮಾಡುವರು. ಎಲ್ಲ ಪೂಜೆಯ ಜವಾಬ್ದಾರಿಯನ್ನು ಶ್ರೀಮತಿ ಶಾಂತಪ್ಪ ಸಂಗನಗೌಡ ದೊಡ್ಡಗೌಡರ ಇವರು ನೆರವೇರಿಸಿಕೊಂಡು ಹೋಗುವರು. ತಲೆಮಾರಿನಿಂದ ನಮ್ಮ ಹಿರ್‍ಯಾರು ಆಚರಿಸಿಕೊಂಡು ಬಂದಾರ ನಾವು ಆಚರಣೆ ಮಾಡಾಕ ಹತ್ತೇವು. ಆದರೆ ನಮ್ಮ ಹಿರ್‍ಯಾರು ಮನೆಯಲ್ಲಿ ಇಟ್ಟು ಪೂಜೆ ಮಾಡುತ್ತಿದ್ರು, ನಾವು ಕಳೆದ ಇಪ್ಪತ್ತು ವರ್ಷಗಳಿಂದ ಮೆರವಣಿಗೆ ಮಾಡುತ್ತಾ ಹೊಳಿಗೆ ಚೆಂಗಳಕವ್ವನ ಕಳಿಸುತ್ತ ಬಂದೀವು. ದೇವರು ನಮಗೆ ಚಲೋ ಇಟ್ಟಾನ, ಅಂತಾರ ಮನೆಯ ಹಿರಿಯರಾದ ಸಂಗನಗೌಡ್ರು. ಮನೆಯಲ್ಲಿ ಚೆಂಗಳಕವ್ವನ ಮಾಡಾನ ಬ್ಯಾರೇ ಮಾಡ್ಯಾರ. ಉತ್ಸವ ಮುಗಿದ ನಂತರ ಅದೇ ಮಾಡದಲ್ಲಿ ಇಟ್ಟು ಪೂಜೆ ಮಾಡುತ್ತಾ ಹೋಗುತ್ತಿವೆ ಅಂತಾರ ಮನೆಯ ಹಿರಿಯರು. ಪ್ರತಿವರ್ಷ ಐದು ಹೊಸ ಬಳೆಗಳನ್ನು ತಂದು ಚೆಂಗಳಕವ್ವನಿಗೆ ಇಡಿಸುವುದು. ಹಳೆಯ ಬಳೆಗಳನ್ನು ಹುಡುಗರಿಗೆ ಇಟ್ಟುಕೊಳ್ಳಲು ಕೊಡುತ್ತೇವೆ. ಚೆಂಗಳಕವ್ವನ ಹಬ್ಬ ಆಚರಣೆ ಮಾಡುವದರಿಂದ ನಮ್ಗೆ ಚಲೋ ಆಗೈತಿ ಮುಂದು ಹಿಂಗ ನಡೆಸಿಕೊಂಡು ಹೊಕ್ಕಿವಿ ಅಂತಾರು ಸಂಗನಗೌಡ್ರ.

**ಹೆಂಡಿ (ಸೆಗಣಿ) ಓಕಳಿ ಮಹತ್ವ**

ನೋಡಾ ನೀ ಚಲೋ ತಂಕ ಆಟ ಮಾಡಿದ್ರ ಬೇಸ್ ಇಲ್ಲದಿದ್ರ ಹೆಂಡಿ (ಸೆಗಣಿ) ತುಂಬಕೊಂಡ ಕುಂತರತೀನಿ ಅಂತಿದ್ರು ನಮ್ಮ ಹಿಂದಿನ ಹಿರ್‍ಯಾರು. ಇದರ ಅರ್ಥ ಏನಂದರ ಚೆಂದ ನಾಟಕ ಮಾಡಿದರೆ ನಿನಗೆ ಬಕ್ಷಿಸ್ ಕೊಡತೀವಿ ಇಲ್ಲದಿದ್ದರ ನಿನಗ ಅವಮಾನ ಮಾಡತೇವಿ ಅನ್ನೋದು ಈ ಮಾತಿನ ಅರ್ಥ. ಈ ಆಚರಣೆಯಲ್ಲಿ ಬರುವ ಚೆಂಗಳಕವ್ವ ಹಾಗೂ ಶಿರಿಯಾಳಶೆಟ್ಟಿ ಇಬ್ಬರು ಮಹಾನ್ ಶಿವಭಕ್ತರು. ಭಕ್ತರ ಪರೀಕ್ಷೆಗಾಗಿ ಸಾಕ್ಷಾತ್ ಭಗವಂತನು ಜಂಗಮ ವೇಷದಲ್ಲಿ ಬಂದು, ತಾನು ಪರೀಕ್ಷೆ ಮಾಡಿ ಮಗ ಚಿಲ್ಲಾಳನ್ನು ಕೊಂದು ಆತನ ಮಾಂಸದ ಅಡುಗೆ ಮಾಡಿ ತನಗೆ ಪ್ರಸಾದ ಮಾಡಿಸಲು ಕೇಳುತ್ತಾನೆ. ಭಗವಂತನ ಇಚ್ಛೆಯಂತೆ ಮಗ ಚಿಲ್ಲಾಳನ್ನು ಕೊಂದು ಅಡುಗೆ ಮಾಡಿ ಉಣಬಡಿಸುತ್ತಾರೆ. ಈ ಶಿವಶರಣರ ಭಕ್ತಿಗೆ ಮೆಚ್ಚಿ ಅವರನ್ನು ಕೈಲಾಸಕ್ಕೆ ಕರೆದೊಯ್ಯುತ್ತಾನೆ. ಶಿವನಿಗೆ ತಮ್ಮ ಮಗನನ್ನೇ ಕೊಂದು ಮಾಂಸದಡಿಗೆ ಮಾಡಿದ್ದೇವೆಂಬ ಅಹಂನಲ್ಲಿ ಅವರು ಶಿವಗಣಗಳ ಜೊತೆಗೆ ಗರ್ವದಿಂದ ವರ್ತಿಸುತ್ತಾರೆ. ಶಿವಗಣಂಗಳು ಇವರ ವರ್ತನೆಯನ್ನು ಖಂಡಿಸಿ ಇವರ ಸೊಕ್ಕು ಮುರಿಯಲು ಥೂ! ಇವ್ರ ಮುಖಕ್ಕೆ ಸೆಗಣಿ ಎರಚಿ ಎಲ್ಲರ ನಡುವೆಯೂ ಅವಮಾನಿಸಿ ಬುದ್ಧಿ ಕಲಿಸುವ ಸಲುವಾಗಿ ಚೆಂಗಳಕವ್ವನ ಮುಂದೆ ಇರಿಸಿಕೊಂಡು ಈ ಹೆಂಡಿ ಓಕಳಿ ಆಡುತ್ತಾರೆ ಅನ್ನುತ್ತಾರೆ ಗಿರಿಸಾಗರದ ಹಿರಿಯರು. ಇನ್ನೊಂದೆಡೆಗೆ ದೊರೆಯುವ ಮಾಹಿತಿ ಪ್ರಕಾರ ಭಕ್ತಿಯಲ್ಲಿ ಚೆಂಗಳಕವ್ವ ಹಾಗೂ ನೆಲ್ಲೂರ್ ನಿಂಬೆಕ್ಕ ಇಬ್ಬರು ಸರಿ ಸಮಾನರು ಮತ್ತು ಸಮಕಾಲೀನರು, ಚೆಂಗಳಕವ್ವನ ಹಾಗೆ ತನ್ನ ಮಗನನ್ನು ಅಡುಗೆ ಮಾಡಿ ಜಂಗಮರಿಗೆ ಪ್ರಸಾದ ಮಾಡಿಸಿದವಳು. ಆ ಜಂಗಮರ ಇಚ್ಛೆಯಂತೆ ನೀನು ನಿನ್ನ ಮಗನನ್ನು ಕೂಗಿ ಕರೆ ಎಂದಾಗ ನೆಲ್ಲೂರ್ ನಿಂಬೆಕ್ಕ ದುಃಖದಿಂದ ಸುಮ್ಮನೆ ನಿಲ್ಲುತ್ತಾಳೆ. ಅದೇ ಮಾತನ್ನು ಚೆಂಗಳಕವ್ವನಿಗೆ ಜಂಗಮರು ಹೇಳಿದಾಗ ಕಂದನ ಮೇಲಿನ ವಾತ್ಸಲ್ಯಕ್ಕಾಗಿ "ಚಿಲ್ಲಾಳ" ಎಂದು ಕೂಗಿದಾಗ ಅಲ್ಲಿ ಮಗ ಬಂದು ಜಂಗಮರ ಮುಂದೆ ನಿಲ್ಲುತ್ತಾನೆ. ಇದನ್ನು ಕಂಡು ಸೇರಿದ ಜನರೆಲ್ಲಾ ಥೂ ಇವಳ ಮಾರಿಗೆ ಹೆಂಡಿ (ಸೆಗಣಿ) ಹಾಕಲಿ

ಅಂದರಂತೆ. ಆಗ ಪರಮಾತ್ಮನು ನೀನು ಮಾಡಿದ ಕೆಲಸವನ್ನು ಬಾಯಿಯಿಂದ ಆಡಿ ತೋರಿಸಿದ ಕಾರಣ ನಿನಗೆ ಇಹ ಜನ್ಮದಲ್ಲಿ ಮುಕ್ತಿ ಇಲ್ಲ. ಆದಕಾರಣ ನೀನು ಮುಂದಿನ ಜನ್ಮದಲ್ಲಿ ತೊಗಲು ಬಾವಲಿ (ತಿಂದದನ್ನು ಬಾಯಿಂದ ಉಗುಳುವ ಪ್ರಾಣಿ) ಜನ್ಮತಾಳಿ ನನ್ನ ನಾಮಸ್ಮರಣೆ ಮಾಡಿಕೊಂಡು ನನ್ನ ಸನ್ನಿಧಿಗೆ ಬರಬೇಕೆಂದು ಆಜ್ಞೆ ಮಾಡಿದನೆಂದು, ಹೆರಕಲ್ಲದ ಮಲ್ಲಪ್ಪ ನೀರಲಕೇರಿ ಹೇಳಿದರು. ಅದಕ್ಕಾಗಿ ಈ ಜಾತ್ರೆಯಲ್ಲಿ ಹೆಂಡಿ ಅರಲು ಆಟವನ್ನು ಊರಿನ ಎಲ್ಲ ಸ್ತ್ರೀಯರು ಬೇರೆ ಬೇರೆ ಗುಂಪುಗಳಾಗಿ ಆಟವಾಡುತ್ತಾರೆ ಎನ್ನುತ್ತಾರೆ.

ಈ ಆಚರಣೆಯಲ್ಲಿ ಹೆಂಡಿ (ಸೆಗಣಿ) ಓಕಳಿಯ ಕುರಿತು ಊರಿಂದೂರಿಗೆ ಜನರಿಂದ ಜನರಿಗೆ ಬೇರೆ ಬೇರೆ ಅಭಿಪ್ರಾಯ ಅನಿಸಿಕೆಗಳಿವೆ. ಮುಖ್ಯವಾದಂಥ ಉದ್ದೇಶ ಮಾತ್ರ, ಮನುಷ್ಯ ಎಂಥ ಉಚ್ಚಮಟ್ಟದಲ್ಲಿರಲಿ ಅಷ್ಟೇ ಕೆಳಮಟ್ಟದಲ್ಲಿ ಇರಲಿ, ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬಾಳ್ವೆ ಮಾಡಬೇಕು. ನಮ್ಮ ನಡೆ ನುಡಿಯಲ್ಲಿ ಸ್ವಲ್ಪ ವ್ಯತ್ಯಾಸವಾದರೆ ನಮಗೂ ಹೆಂಡಿ ಬೀಳುವುದು ಗ್ಯಾರಂಟಿ ಎನ್ನುತ್ತಾರೆ ಯಂಡಿಗೇರಿಯ ಮುರಿಗೆಪ್ಪ ಬೀಳಗಿ. ಒಟ್ಟಾರೆ ಈ ಅಧ್ಯಯನದಿಂದ ನಮಗೆ ತಿಳಿದು ಬರುವ ವಿಷಯವೇನೆಂದರೆ, ಆಡದೆ ಮಾಡುವವನು ರೂಢಿಯೊಳಗುತ್ತಮ ಎಂಬ ಮಾತಿನ ಮರ್ಮವನ್ನು ತಿಳಿದು ಬಾಳಬೇಕಾಗಿರುವುದು ಇಂದಿನ ಜರೂರತೆಯಾಗಿದೆ.

**ಸಂತಾನ ದೇವತೆಯಾಗಿ ಚೆಂಗಳಕವ್ವ**

ಜನಪದರ ಸಂಸ್ಕೃತಿಯಲ್ಲಿ ಹಲವಾರು ಆಚರಣೆಗಳು, ಹಬ್ಬ - ಹರಿದಿನಗಳು, ಜಾತ್ರೆ - ಉತ್ಸವಗಳು, ಋತುಮಾನಕ್ಕೆ ಅನುಗುಣವಾಗಿ ಬಂದು ಹೋಗುತ್ತವೆ. ಇವೆಲ್ಲವುಗಳು ಅವರಲ್ಲಿ ಜೀವನೋತ್ಸಾಹ ಹಾಗೂ ಬಂಧುತ್ವಗಳನ್ನು ಬೆಸೆಯುವ ಆಚರಣೆಗಳೆಂದರೆ ತಪ್ಪಾಗಲಿಕ್ಕಿಲ್ಲ. ಇಂತಹ ವಿಶೇಷ ಆಚರಣೆಗಳಲ್ಲಿ ನಾಗರ ಪಂಚಮಿಯ ಸಿರಿಯಾಳ ಷಷ್ಠಿ (ವರ್ಷ ತೊಡಕು) ದಿವಸ ಸ್ಥಾಪನೆಗೊಳ್ಳುವ ಚೆಂಗಳಕವ್ವನ ಜಾತ್ರೆ ವಿಶೇಷವಾಗುವುದರ ಜೊತೆಗೆ ಹಲವು ಸಂಶೋಧನೆಗಳಿಗೆ ಎಡೆ ಮಾಡಿಕೊಟ್ಟಿದೆ. ಆದಿ ಕಾಲದಿಂದಲೂ ನಮ್ಮ ಪುರಾತನರು ನೀರು, ಬೆಂಕಿ, ಗಾಳಿ, ಭೂಮಿಗಳನ್ನು ದೇವರೆಂದು ಪೂಜಿಸಿದವರು. ಅದರಲ್ಲಿ ನೆಮ್ಮದಿ ಹಾಗೂ ಶಾಂತಿಯನ್ನು ಕಂಡುಕೊಂಡವರು. ನಮ್ಮ ಜನಪದರಿಗೆ ಈ ಚೆಂಗಳಕವ್ವ ಎಲ್ಲ ಇಷ್ಟಾರ್ಥಗಳ ವರದೇವಿಯಾಗುವುದರ ಜೊತೆಗೆ ಸಂತಾನ ಭಾಗ್ಯ ನೀಡುವಂಥ ದೇವತೆಯಾಗಿರುತ್ತಾಳೆ. ಸಂತಾನ ಭಾಗ್ಯ ಇಲ್ಲದ ಹೆಣ್ಣು ಮಕ್ಕಳು ಚೆಂಗಳಕವ್ವ ಜಾತ್ರೆಯ ಎರಡನೆಯ ದಿವಸ ಮಗನಾದ “ಚೆಲ್ಲಾಳ” ನಾಮಕರಣವನ್ನು ಊರಿನ ಎಲ್ಲ ಮಹಿಳೆಯರು ಸೇರಿ ಮಾಡುತ್ತಾರೆ. ಆ ದಿವಸ ಆ ತೊಟ್ಟಿಲ ಕೆಳಗೆ ಕುಳಿತು ಭಯ ಭಕ್ತಿಯಿಂದ ಬೇಡಿಕೊಂಡರೆ ಒಂದು ವರ್ಷ ತುಂಬುವುದರೊಳಗೆ ಸಂತಾನ ಭಾಗ್ಯ ಲಭಿಸುತ್ತದೆ ಎನ್ನುತ್ತಾರೆ ಬೀಳಗಿ ತಾಲೂಕಿನ ಗಿರಿಸಾಗರ ಗ್ರಾಮದ ಹಿರಿಯರು. ಇವರ ನಂಬಿಗೆ ಎಂಬಂತೆ ಸಂತಾನ ಪ್ರಾಪ್ತಿಯಾದ ಉದಾಹರಣೆಗಳು ಇವೆಯೆಂದು ಹೇಳುತ್ತಾರೆ. ನವಲಗುಂದ ಮುಸ್ಲಿಂ ಬಾಂಧವರ ಮಗಳನ್ನು ಬಾಗಲಕೋಟೆ ತಾಲೂಕಿನ ಶಿರೂರಿಗೆ ಮದುವೆ ಮಾಡಿ ಕೊಡಲಾಗಿತ್ತು. ಆ ಹೆಣ್ಣು ಮಗಳು ಗಂಡನ ಮನೆಯಿಂದ ಚೆಂಗಳಕವ್ವ ಜಾತ್ರೆಗೆ ನವಲಗುಂದಕ್ಕೆ ಬಂದು ಪ್ರಾರ್ಥನೆಗೈದುದರ ಫಲವಾಗಿ ಮುಂದಿನ ವರ್ಷ ಜಾತ್ರೆಯು ಬರುವುದರೊಳಗೆ ಅವಳಿಗೆ ಸಂತಾನ ಪ್ರಾಪ್ತವಾಯಿತು ಎಂದು ಆಕೆ ಭಕ್ತಿ ಪೂರ್ವಕವಾಗಿ ಹೇಳುತ್ತಾಳೆ ಅವಳ ತಾಯಿ ಶ್ರೀಮತಿ ಮೈರೂಣಬಿ ಕುಂದಗೊಳ. ಇಷ್ಟಲ್ಲಾ ಇನ್ನೂ ಹಲವಾರು ಉದಾಹರಣೆಗಳು ನಮ್ಮ ಮುಂದೆ ಇವೆ. ಭಕ್ತಿಯಿಂದ ಬೇಡಿದವರಿಗೆ ಬೇಡಿದ್ ಕೆಲಸ ಆಗ್ತಾವ ಅದಕ್ಕೆ ನಮ್ಮೂರಿನ ಹೆಣ್ಣು ಮಗಳು ನನ್ನ ತಂಗಿ ನವಲಗುಂದದಾಗ ಚೆಂಗಳಕವ್ವನ ಗುಡಿ ಕಟ್ಟಿಸ್ಯಾಳ. ಇಡೀ ದೇಶದ ಮ್ಯಾಗ ಹುಡುಕಿದರು ಎಲ್ಲೂ ಚೆಂಗಳಕವ್ವನ ಗುಡಿ ಇಲ್ಲ ಎಂದು ಅತಿ ವಿನಯದಿಂದ ಹೇಳುತ್ತಾರೆ ನವಲಗುಂದದ ಹಿರಿಯರಾದ ಸೋಮಪ್ಪ ಹಳ್ಳದವರು. ಹೀಗೆ ಬೇರೆ ಬೇರೆ ಊರುಗಳಲ್ಲಿ ಕ್ಷೇತ್ರ ಕಾರ್ಯ ಕೈಗೊಂಡ ಸಂದರ್ಭದಲ್ಲಿ ಊರಿನ ಹಿರಿಯರು ಮಹಿಳೆಯರು ತಮಗಾದಂಥ ಒಳ್ಳೆಯ ಫಲಗಳನ್ನು ನಮ್ಮೊಂದಿಗೆ ಹಂಚಿಕೊಂಡರೆ, ಯಂಡಿಗೇರಿಯ ಭೀಮಪ್ಪ ಬಡಿಗೇರ ಹಾಗೂ ತೀರ್ಥಯ್ಯ ಮಠಪತಿ ಇವರು ಈ ಊರಿನಲ್ಲಿ ಚೆಂಗಳಕವ್ವ ಜಾತ್ರೆಯನ್ನು ಬಹಳ ಕಾಲದಿಂದಲೂ ಮಾಡಿಕೊಳ್ಳುತ್ತಾ ಬಂದವರು, ಎಲ್ಲಾದಕ್ಕೂ ಮೊದಲು ನಮ್ಮಲ್ಲಿ ದೇವರ ಮೇಲೆ ನಂಬಿಕೆ ಇರಬೇಕು. ನಂಬಿಕೆಯಿಂದ ಬೇಡಿಕೊಂಡರೆ ಆ ತಾಯಿ ಯಾರನ್ನು ಕೈ ಬಿಡುವುದಿಲ್ಲ. ನಮ್ಮೂರಾಗ ಎಷ್ಟಮಂದಿಗೆ ಒಳ್ಳೆಯದ ಆಗಿಲ್ಲಾ, ಆಕಿನ ಶಕ್ತಿನ ಅಂತಾದು ಎಂದು ಹೇಳುವುದರ ಮೂಲಕ “ಭಕ್ತಿಯೊಂದೆ

ಸಾಧನ ಮುಕ್ತಿಗೆ" ಎಂಬ ಮಾತನ್ನು ಎಲ್ಲರೂ ತಿಳಿಯಬೇಕಾದಂಥ ಅವಶ್ಯಕತೆ ಇದೆ ಎಂಬುದನ್ನು ಮನವರಿಕೆ ಮಾಡಿಕೊಡುವುದರ ಜೊತೆ ಚೆಂಗಳಕವ್ವನ ಮೇಲೆ ಅವರಿಟ್ಟ ಭಯ, ಭಕ್ತಿಗಳು ಅಚಲವೆಂಬುದು ನಮಗೆ ಅಧ್ಯಯನದಿಂದ ತಿಳಿದು ಬರುತ್ತದೆ.

**ಜನಪದರ ಕಥೆ**

ಕಾಂಚೀಪುರ ಎಂಬ ದೇಶವನ್ನು ಸಿರಿಯಾಳ ಎಂಬ ಮಹಾರಾಜನು ಆಳುತ್ತಿದ್ದನು. ಪ್ರತಿನಿತ್ಯ ತನ್ನ ಮನೆಗೆ ಬಂದು ಬೇಡುವ ದೀನರಿಗೆ ದಾನವನ್ನು ಕೊಡುತ್ತಿದ್ದನು. ದಾನ ಧರ್ಮಗಳಲ್ಲಿ ಕರ್ಣನನ್ನು ಮೀರಿಸುವಂತವನಾಗಿದ್ದನು. ಇಂತಹ ಮಹಾರಾಜನಿಗೆ ತಕ್ಕಂತೆ ಇವನ ಮಹಾರಾಣಿ (ಚಾಂಗುಣಿ) ಚೆಂಗಳಕವ್ವ ಅಷ್ಟೇ ಭಕ್ತಿವಂತಳಾಗಿದ್ದಳು. ಭೂಲೋಕದಲ್ಲಿ ಅಷ್ಟೇ ಅಲ್ಲಾ ಇಡೀ ದೇವತೆಗಳಲ್ಲಿ ಇಂತಹ ಭಕ್ತಿವಂತರು ಎಲ್ಲೂ ಇಲ್ಲವೆಂದು ಪ್ರಚಾರವಾಗಿತ್ತು. ತ್ರಿಲೋಕ ಸಂಚಾರಿಯಾದ ನಾರದ ಮುನಿಗಳು ಇಡೀ ಬ್ರಹ್ಮಾಂಡವನ್ನೇ ತಿರುಗಿ ದೇವಲೋಕ ಪ್ರವೇಶ ಮಾಡುವ ಸಮಯದಲ್ಲಿ ಶಿವ ಪಾರ್ವತಿಯರು ನಾರದ ಮುನಿಗಳನ್ನು ಕರೆದು ಭೂಲೋಕ ಸಮಾಚಾರ ಕುರಿತು ಕೇಳಿದರು. ಆಗ ನಾರದ ಮುನಿಗಳು ನಾನು ಸಮಸ್ತ ಲೋಕಗಳನ್ನೆಲ್ಲಾ ಸಂಚರಿಸಿ ಭೂಲೋಕಕ್ಕೆ ಬಂದೆ. ಅಲ್ಲಿ ಕಾಂಚಿ ಎಂಬ ರಾಜಧಾನಿಯನ್ನು ಸಿರಿಯಾಳ ಎಂಬ ಅರಸನು ಆಳುತ್ತಾನೆ. ಅವನು ದಯಾಮಯ ಹಾಗೂ ತನ್ನ ಪ್ರಜೆಗಳನ್ನು ಸ್ವತಃ ಮಕ್ಕಳಂತೆ ಕಾಣುತ್ತಾನೆ. ಅವನಂಥ ಸದ್ಗುಣ ಸಂಪನ್ನರು ಹಾಗೂ ನಿನ್ನ ಪರಮ ಭಕ್ತರನ್ನು ನಾನು ಕಂಡೆ. ಅಂಥ ಭಕ್ತರನ್ನು ಉದ್ಧಾರ ಮಾಡುವುದು ನಿಮ್ಮ ಕೆಲಸವಲ್ಲವೇ ಎಂದು ನಾರದ ಮುನಿಗಳು ಪರಮಾತ್ಮನನ್ನು ಕೇಳುತ್ತಾರೆ. ಆಗ ಪರಮಾತ್ಮನು ನಾನು ಭಕ್ತರನ್ನು ಪರೀಕ್ಷಿಸದೇ ಎಂದೂ ಕೃಪೆ ಮಾಡುವುದಿಲ್ಲ ಎಂದು ಹೇಳಿ, ನಿನ್ನ ಹೇಳಿಕೆಯಂತೆ ಇಂದೇ ಭೂಲೋಕಕ್ಕೆ ಸಿರಿಯಾಳನ ಪರೀಕ್ಷೆಗಾಗಿ ಹೋಗುವೆನೆಂದು ವೃದ್ಧ ಸನ್ಯಾಸಿಯಾಗಿ ಕಾಂಚೀಪುರಕ್ಕೆ ಬಂದು, ಅರಮನೆಯ ಮುಂದೆ ನಿಂತು ಭಿಕ್ಷಾಂದೇಹಿ ಎಂದು ಹೇಳಿದನು. ಅತಿಥಿ ಧ್ವನಿ ಕೇಳಿ ಮಹಾರಾಜನು, ಸ್ವಾಮಿ ನಿಮ್ಮ ಇಚ್ಛೆಯನ್ನು ಹೇಳಿರಿ ಎಂದನು. ವೃದ್ಧ ಸನ್ಯಾಸಿ ರಾಜನೇ ನನಗೆ ಭಯಂಕರ ಹಸಿವೆ ಆಗಿದೆ. ಹಲವಾರು ದಿನಗಳಿಂದ ನನಗೆ ಊಟವಿಲ್ಲ ಎಂದು ಹಪಹಪಿಸುವನು. ಇದನ್ನು ಕಂಡು ಮಹಾರಾಜನು ಸ್ವಾಮಿ ತಮ್ಮ ಇಚ್ಛೆಯನ್ನು ಬೇಗ ಹೇಳಿರಿ ಪೂರ್ಣಗೊಳಿಸುವೆನು ಎಂದನು. ಆಗ ವೃದ್ಧ ಸನ್ಯಾಸಿಯು ಸತ್ಯವಾಗಿಯೂ ನ್ನ ಆಸೆಯನ್ನು ಪೂರ್ಣಗೊಳಿಸುವೆಯಾ ಎಂದು ಕೇಳಿದನು. ನೋಡು ಕೊಟ್ಟ ಮಾತು ತಪ್ಪುವುದಿದ್ದರೇ ಮೊದಲೇ ಹೇಳು ಎಂದು ಸನ್ಯಾಸಿಯು ಗುಡುಗಿದನು. ಸ್ವಾಮಿ ತಮ್ಮ ಅಪ್ಪಣೆಯಾಗಲಿ ಎಂದು ಮಹಾರಾಜ ವಿನಮ್ರವಾಗಿ ಕೇಳಿಕೊಂಡನು. ಮಹಾರಾಜ ನ್ನ ಬಯಕೆಯನ್ನು ಪೂರ್ಣ ಮಾಡುವೆಯಾ ಎಂದು ಸನ್ಯಾಸಿ ಕೇಳಿದಾಗ, ವಿನಯದಿಂದ ಬುದ್ಧಿ ತಮ್ಮ ಬಯಕೆಗಳನ್ನು ತೃಪ್ತಿಗೊಳಿಸುವುದಕ್ಕಾಗಿಯೇ ಈ ಜನ್ಮ ನನಗೆ ದೊರಕಿದೆ, ತಾವು ಅಪ್ಪಣೆ ಮಾಡಿರಿ ಎಂದ ಮಹಾರಾಜ. ಆಗ ವೃದ್ಧ ಸನ್ಯಾಸಿ ನನಗೆ ನರ ಮಾಂಸ ತಿನ್ನುವ ಆಸೆಯಾಗಿದೆ ಎನ್ನಲು ಆವಾಗ ಮಹಾರಾಜನು ತಮ್ಮ ಅಪ್ಪಣೆಯಂತೆ ಮಾಡುತ್ತೇನೆಂದೂ ಇನ್ನೂ ಏನಾದರೂ ಬಯಕೆಗಳಿದ್ದರೆ ಹೇಳಿರಿ ಎಂದು ಕೇಳಿಕೊಂಡನು. ಆಗ ಸನ್ಯಾಸಿಯು ಬೇರೆಯವರ ನರ ಮಾಂಸ ಬೇಕಾಗಿಲ್ಲ, ನಿನ್ನ ಕರಳ ಬಳ್ಳಿಯನ್ನು ಕಡಿದು ಪಾಕ ಮಾಡಿ, ನನಗೆ ಊಟ ಮಾಡಿಸಬೇಕೆಂದು ಕೇಳಿಕೊಂಡನು.

ಸಿರಿಯಾಳ ಮಹಾರಾಜ ಸನ್ಯಾಸಿಯ ಮಾತು ಕೇಳಿ ಮೂಖ ಪ್ರೇಕ್ಷಕನಾಗಿ ನಿಂತುಕೊಂಡು, ಇದ್ದೊಬ್ಬ ಮಗನನ್ನು ಹೇಗೆ ಪಾಕ ಮಾಡಿ ಸನ್ಯಾಸಿಗೆ ಊಟ ಮಾಡಿಸುವುದು ಎಂದು ಮನದಲ್ಲಿ ವಿಚಾರಿಸುತ್ತಿರಲು, ಸನ್ಯಾಸಿಯು ರಾಜ ಕೊಟ್ಟ ವಚನಕ್ಕೆ ತಪ್ಪಿದರೆ ಹೂಂ ಶಾಪ ಕೊಟ್ಟು ಹೋಗುವೆನು ಎಂದು ಬೊಬ್ಬಾಟ ಮಾಡುವನು. ಸಿರಿಯಾಳ ಹೆಂಡತಿ ಚಾಂಗುಣಿಗೆ ಎಲ್ಲ ವೃತ್ತಾಂತವನ್ನು ತಿಳಿಸಿದನು. ಆಗ ಶಾಲೆಗೆ ಹೋದ ಬಾಲಕ ಚಿಲ್ಲಾಳನನ್ನು ಕರೆಯಿಸಿ ಅಪ್ಪಿ ಮುದ್ದಾಡಿ ಚಾಂಗುಣಿ ಅನ್ನುತ್ತಾಳೆ, ಸನ್ಯಾಸಿಯು ನಿನ್ನ ಮಾಂಸವನ್ನು ಪಾಕ ಮಾಡಿ ಭೋಜನ ಮಾಡಿಸಲು ಅಪ್ಪಣೆ ಮಾಡಿದ್ದಾನೆ ಕಂದಾ ಎಂದು ಬಿಕ್ಕಿ ಬಿಕ್ಕಿ ಅಳುತ್ತಾ ಹೇಳುವಳು. ಆಗ ಚಿಲ್ಲಾಳ ಅವ್ವಾ ಇದು ಪರೀಕ್ಷೆಯ ಕಾಲ. ನನ್ನ ಶಿರ ಕಡಿದು ಪಾಕವ ಮಾಡು. ನಾನು ಮತ್ತೆ ಮುಂದಿನ ಜನ್ಮದಲ್ಲಿ ನಿನ್ನ ಗರ್ಭದಲ್ಲಿ ಜನಿಸಿ ಬರುವೆನೆಂದನು. ಚಾಂಗುಣಿ ಧೈರ್ಯದಿಂದ ಕೂಸಿನ ಕುತ್ತಿಗೆಯನ್ನು ಕೊಯ್ದು, ರುಂಡ ಮುಂಡ ಬೇರೆ ಬೇರೆ ಮಾಡಿ ರುಂಡವನ್ನು ತೆಗೆದಿಟ್ಟು ಬರೇ ದೇಹವನ್ನು ಪಾಕ ಮಾಡಿ, ಅತಿಥಿಗೆ ಪದ್ಧತಿಯಂತೆ ಸ್ನಾನ ಪೂಜಾದಿಗಳನ್ನು ಮುಗಿಸಿ ಪ್ರಸಾದ ಬಡಿಸಿದಳು. ಆಗ ಸನ್ಯಾಸಿಯು ಭಯಂಕರ ಸಿಟ್ಟಿಗೆದ್ದು ಇದರಲ್ಲಿ ರುಂಡದ ಮಾಂಸವಿಲ್ಲ ಮಗನ ಮೋಹದಿಂದ ರುಂಡ ತೆಗೆದಿಟ್ಟು ಬರೇ ಮುಂಡದ ಪಾಕ

ಮಾಡಿರುವಿರಿ. ಮನಸ್ಸಿಲ್ಲದ ಭಕ್ತಿ ನನಗೆ ಬೇಡ, ನಾನು ಶಾಪ ಕೊಟ್ಟು ಹೋಗುವೆನು ಎಂದು ಸನ್ಯಾಸಿ ಪ್ರಸಾದ ಬಿಟ್ಟು ಮೇಲೆ ಏಳಲು, ಇಬ್ಬರು ಸತಿಪತಿಗಳು ಸನ್ಯಾಸಿಯ ಕಾಲಿಗೆ ಬಿದ್ದು ಬೇಡಿಕೊಳ್ಳಲು, ಆಗ ಸನ್ಯಾಸಿಯು ಆ ಶಿರವನ್ನು ಒಳಕಲ್ಲಿನಲ್ಲಿ ಹಾಕಿ ಒನಕೆಯಿಂದ ಕುಟ್ಟಿ ನೈವೇದ್ಯ ಮಾಡಿರಿ ಎಂದು ಹೇಳಿದಾಗ, ಇಬ್ಬರು ದಂಪತಿಗಳು ಒಪ್ಪಿಕೊಂಡು ಭಕ್ತಿಯಿಂದ ಪಾಕವ ಮಾಡುವರು. ಆಗ ಸನ್ಯಾಸಿಯು ಮೂರು ನೈವೇದ್ಯ ಮಾಡಿರಿ ನನ್ನೊಂದಿಗೆ ನೀವು ಪ್ರಸಾದಕ್ಕೆ ಕುಳಿತುಕೊಳ್ಳಿರಿ ಎಂದು ಇಬ್ಬರು ದಂಪತಿಗಳಿಗೆ ಹೇಳುತ್ತಾನೆ. ಆಗ ಸನ್ಯಾಸಿಯು ಮಕ್ಕಳಿಲ್ಲದವರ ಮನೆಯಲ್ಲಿ ಊಟ ಮಾಡುವುದಿಲ್ಲ. ನಿಮ್ಮ ಮಕ್ಕಳನ್ನು ಕರೆಯಿರಿ ಎಂದು ರಾಜನಿಗೆ ಆಜ್ಞೆ ಮಾಡುತ್ತಾನೆ. ಬುದ್ಧಿ ಇದ್ದೊಬ್ಬ ಮಗನನ್ನು ಕೊಯ್ದು ಪಾಕ ಮಾಡಿ ತಮಗೆ ನೈವೇದ್ಯ ಮಾಡಿದ್ದೇವೆ. ಇಲ್ಲದ ಮಕ್ಕಳನ್ನು ಎಲ್ಲಿಂದ ತರಬೇಕು ಎಂದು ಸನ್ಯಾಸಿಯ ಹತ್ತಿರ ವಿನಮ್ರವಾಗಿ ದಂಪತಿಗಳು ಕೇಳಿಕೊಳ್ಳುತ್ತಾರೆ. ದಯಮಾಡಿ ತಾವು ಪ್ರಸಾದ ಸ್ವೀಕರಿಸಿರಿ ಎಂದು ಆ ವೃದ್ಧ ಸನ್ಯಾಸಿ ಹತ್ತಿರ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ. ಆಗ ಸಾಕ್ಷಾತ್ ಶಂಕರ ಪ್ರತ್ಯಕ್ಷನಾಗಿ ಭಕ್ತ ನಿನ್ನ ಸತ್ವ ಪರೀಕ್ಷೆ ಸಾಕು ನಿನಗೆ ಏನು ವರ ಬೇಕು ಕೇಳು ಎಂದಾಗ, ನನ್ನನ್ನು ಪರೀಕ್ಷೆ ಮಾಡಿದಂತೆ ನಿನ್ನ ಭಕ್ತರನ್ನು ಪರೀಕ್ಷೆ ಮಾಡಬೇಡ ಎಂದು ಸಿರಿಯಾಳ ಮಹಾರಾಜನು ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಂಡರೆ, ಚಾಂಗುಣಿ ನನಗೆ ಪುತ್ರ ದೊರೆಯುವಂತೆ ಮಾಡು ಎಂದಾಗ ಪರಮಾತ್ಮನು ಚಾಂಗುಣಿಗೆ "ಚಿಲ್ಲಾಳ" ಎಂದು ಕರೆಯಿರಿ ಎಂದಾಗ ಚಾಂಗುಣ ದೇವಿ ಕರೆಯುವಳು. ಆಗ ಚಿಲ್ಲಾಳ ಅವ್ವಾ ಎಂದು ಬಂದು ತಾಯಿಯನ್ನು ತಬ್ಬಿಕೊಳ್ಳುವನು. ನಿಮ್ಮಂಥ ಭಕ್ತಿವಂತರು ಈ ಭೂಮಿಯ ಮೇಲೆ ಯಾರು ಇಲ್ಲ. ನೀವು ಸುಖದಿಂದ ಬಾಳಿ ಕೈಲಾಸಕ್ಕೆ ಬನ್ನಿರಿ ಎಂದು ಭಗವಂತನು ಮಾಯವಾಗುತ್ತಾನೆ.

**<u>ಚೆಂಗಳಕವ್ವನ ಕುಳ್ಳರಿಸಿದಾಗ ಹಾಡುವ ಹಾಡುಗಳು</u>**

**ಹಾಡು ೧**

ಸಣ್ಣಿರಿಬಿ ಭಾವ್ಯಾಗ ಸಣ್ಣ ಬೆಲ್ಲದಕನ್ನಿ
ಅಣ್ಣ ಬಸವಣ್ಣ ಕಸಗೊಂಡ ಜೋ. ಜೋ.
ಅಣ್ಣ ನೀ ಬಸವಣ್ಣ ಕಸಗೊಂಡ ಸುದ್ದಿ ಕೇಳಿ

ಚೆಲುವ ಹುಟ್ಟಾನ ಚನ್ನಬಸವಣ್ಣ ಜೋ. ಜೋ. ॥ ೧ ॥
ದೊಡ್ಡಿರಬಿ ಭಾವ್ಯಾಗ ದೊಡ್ಡ ಬೆಲ್ಲದ ಕನ್ನಿ
ಅಣ್ಣ ಬಸವಣ್ಣ ಕಸಗೊಂಡ ಜೋ. ಜೋ.
ಅಣ್ಣ ನೀ ಬಸವಣ್ಣ ಕಸಗೊಂಡ ಸುದ್ದಿ ಕೇಳಿ

ಚೆಲುವ ಹುಟ್ಟಾನ ಚನ್ನಬಸವಣ್ಣ ಜೋ. ಜೋ. ॥ ೨ ॥
ಚಿಕ್ಕಿ ಸಿರಿ ಉಟ್ಟವರು ಚಿಲಕದ ಬಟ್ಟ ಇಟ್ಟವರು
ಅವರು ಚಂದ್ರಗಿರಿ ಧರ್ಮರ ಜೋ. ಜೋ.
ಅವರ ನೀ ಚಂದ್ರಗಿರಿ ಧರ್ಮರ ಚಂದ್ರವ್ವ ತಾಯಿ
ನೀವ ಬಾಗಿನಕ ಬರಬೇಕು ಜೋ. ಜೋ. ॥ ೩ ॥
ಗಂಜಿ ಸಿರಿ ಉಟ್ಟವರು ಗಂಧದ ಬೊಟ್ಟ ಇಟ್ಟವರು
ಅವರ ಸೀತಿಮನಿ ಧರ್ಮರ ಜೋ. ಜೋ.
ಅವರ ಸೀತಿಮನಿ ಧರ್ಮರ ಸೀತವ್ವತಾಯಿ
ನೀವ ಬಾಗಿನಕ ಬರಬೇಕ ಜೋ. ಜೋ. ॥ ೪ ॥

**ಹಾಡು ೧**

ಅರಷಿಣ ವನವ ಅರಿವಿನ ಕವಲಿ ನೀರು ತಿರುವುತ
ಸರಿಸ್ಯಾರ ಬಂದಾರ ಶಿವನ ಬಾಗಿನಕ ಜೋ. ಜೋ.
ಉತ್ತೋತ್ತಿ ವನವ ಉತ್ತೋತ್ತಿ ಕವಲಿನೀರ ತಿರುವುತ
ಮಿತ್ರರ ಬಂದಾರ ಶಿವನ ಬಾಗಿನಕ ಜೋ. ಜೋ.
ನಿಂಬಿಯ ವನವ ನಿಂಬಿಯ ಕವಲಿ ನೀರ ತಿರುತ್ಯ
ರಂಬ್ಯಾರು ಬಂದಾರು ಶಿವನ ಮನಿಯ ಬಾಗಿನಕ ಜೋ. ಜೋ.
ಅಡಕಿಯ ವನವ ಅಡಕೀಯ ಕವಲಿ ನೀರ ತಿರುವುತ
ಕಡಿಕ್ಯಾರ ಬಂದಾರು ಶಿವನ ಮನಿಯ ಬಾಗಿನಕ ಜೋ. ಜೋ.
ಬಾಳಿಯ ವನವ ಬಾಳಿಯ ಕವಲಿ ನೀರ ತಿರುವುತ
ಬಾಲ್ಯಾರು ಬಂದಾರು ಶಿವನ ಮನಿಯ ಬಾಗಿನಕ ಜೋ. ಜೋ.
ತೆಂಗಿನ ವನವ ತೆಂಗಿನ ಕವಲಿ ನೀರ ತಿರುವುತ
ರಂಗ್ಯಾರು ಬಂದಾರು ಶಿವನ ಮನಿಯ ಬಾಗಿನಕ ಜೋ. ಜೋ.

**ಹಾಡು ೨**

ನುಗ್ಗಿಯ ವನದಮ್ಯಾಲೆ ಹಚ್ಚೈತ್ರೀ ಬಳ್ಳಿ
ಹಿಂಗ ಉಕ್ಕಿನ ಉಗುರಿಲೇ ಕೊಯಿಸಾರು ಎಲಿಯ ಜೋ. ಜೋ.
ಉಕ್ಕಿನ ಉಗುರಲೇ ಕೊಯಿಸಾರು ಎಲಿಯ
ಹಿಂಗ ಬಾಳಿ ಸಪ್ಪಿಲೇ ಬಿಗಿದಾರು ಎಲಿಯ ಜೋ. ಜೋ.
ಬಾಳಿ ಸಪ್ಪಿಲೇ ಬಿಗಿದಾರೋ ಎಲಿಯ
ಹಿಂಗ ಎತ್ತಿನ ಮ್ಯಾಲೊಂದು ಹೇರ್‍ಯಾರ ಎಲಿಯ ಜೋ. ಜೋ.
ಎತ್ತಿನ ಮ್ಯಾಲೊಂದು ಹೇರ್‍ಯಾರ ಎಲಿಯ
ಹಿಂಗ ಬೀಳಗಿ ಸಂತ್ಯಾಗ ಇಳಿವ್ಯಾರು ಎಲಿಯ ಜೋ. ಜೋ.
ಬೀಳಗಿ ಸಂತ್ಯಾಗ ಇಳುವ್ಯಾರು ಎಲಿಯ
ಹಿಂಗ ದುಡ್ಡಿಗೆ ನೂರು ಮಾಡಿಕೊಟ್ಟಾರು ಎಲಿಯ ಜೋ. ಜೋ.
ದುಡ್ಡಿಗೆ ನೂರು ಮಾಡಿಕೊಟ್ಟಾರು ಎಲಿಯ
ಹಿಂಗ ಕಂದನ ಬಾಯಾಗ ಚಂದಾಗುವ ಎಲಿಯ ಜೋ. ಜೋ.
ಕಂದನ ಬಾಯಾಗ ಚಂದಾಗುವ ಎಲಿಯ
ಹಿಂಗ ಬಾಲ್ಯಾರ ಬಾಯಾಗ ಸುಳಿದಾಡುವ ಎಲಿಯ ಜೋ. ಜೋ.

**ಹಾಡು ೪**

ಕೊಳಲ ಧನಿಯೇ ಕೋಗಿಲೇ ಧನಿಯೇ
ಕೃಷ್ಣನ ಧನಿಯ ಕೇಳಿ ನಾನು ॥ ಪ ॥
ಶ್ರೀಕೃಷ್ಣನ ಕಾಟಕಗಿ ತಾಳಲಾರೇ ಗೋಪಾಲ
ಗೋಪಾಲ ಸರಿಯೇ ಸೋ ಅನ್ನಿ ಸೊಬಾನವೆನ್ನಿರೇ
ಶ್ರೀರಂಗನ ಕೂಡಾ ಸೋ ಅನ್ನಿ ಸೊಬಾನವೆನ್ನಿರೇ ॥ ೧ ॥

ಭದ್ರಾವತಿ ವರತಿನಲ್ಲಿ ಹಾಲಮಾರುತ ನಾನೇ ಹೋದೆ.
ದುಸವಲ್ಲಿಗೇಡಿ ಕೃಷ್ಣ ಬಂದು ಹಾಲಸ್ವಾರಿ ಒಡೆದು
ಹೋದಾ ಸೋ ಅನ್ನೀರಿ ಸೊಬಾನವೆನ್ನೀರಿ
ಶ್ರೀರಂಗನ ಕೂಡಾ ಸೋ ಅನ್ನಿ ಸೊಬಾನವೆನ್ನೀರಿ ॥ ೨ ॥

ಭದ್ರಾವತಿ ವರತಿನಲ್ಲಿ ಮಜ್ಜಿಗೆ ಮಾರುತ ನಾನೇ ಹೋದೆ
ದುಸವಲ್ಲಿಗೇಡಿ ಕೃಷ್ಣಾ ಬಂದು ಮಜ್ಜಿಗೆ ಗಡಿಗೆ
ಒಡೆದು ಹೋದ ಸೋ ಅನ್ನಿ ಸೊಬಾನವೆನ್ನಿರಿ
ಶ್ರೀರಂಗನ ಕೂಡಾ ಸೋ ಅನ್ನಿ ಸೊಬಾನವೆನ್ನೀರಿ ॥ ೩ ॥

ಭದ್ರಾವತಿ ವರತಿನಲ್ಲಿ ಮಸರ ಮಾರುತಾ ನಾ ಹೋದೆ
ದುಸಮನ್ನಗೇಡಿ ಕೃಷ್ಣ ಬಂದು ಮಸರ ಗಡಿಗೆ
ಒಡೆದು ಹೋದ ಸೋ ಅನ್ನಿ ಸೊಬಾನವೆನ್ನಿರಿ
ಶ್ರೀರಂಗನ ಕೂಡಾ ಸೋ ಅನ್ನಿ ಸೊಬಾನವೆನ್ನೀರಿ ॥ ೪ ॥

ಭದ್ರಾವತಿ ವರತ್ತಿನಲ್ಲಿ ಬೆಣ್ಣೆ ಮಾರುತ ನಾ ಹೋದೆ
ದುಸಮಲ್ಲಗೇಡಿ ಕೃಪ ಕದ್ದಿಲೇ ಬಂದು ಬೆಣ್ಣೆ ನುಂಗಿ ಹೋದ
ಸೋ ಅನ್ನೀರಿ ಸೊಬಾನವೆನ್ನಿರಿ
ಶ್ರೀರಂಗನ ಕೂಡಾ ಸೋ ಅನ್ನಿ ಸೊಬಾನವೆನ್ನಿರಿ ॥ ೫ ॥

**ಹಾಡು ೫**

ಗೆಜ್ಜೆ ಪೈಜಮ ಗೆಜ್ಜೆ
ರುಳಿಯ ಪಂಚೇರ ಹೆಜ್ಜೆ
ನವಿಲ ಕುಣಿದ ನಡುವಿನ ಗೆಜ್ಜೆ ಸೊಬಾನ
ಬಾಯಿ ಬಗತಾನ ಬಾಯಿ
ತುಟ್ಟಿಯ ಹೆಸರಕಾಯಿ
ಮಾತ ಹೇಳ್ಯಾಳ ಮೋಹದ ರಾಣಿ ಸೊಬಾನ

ಬಂಗಾರ ಬಳಿ ಮುಂದ ಬಿಂದೆಲ ಇಟ್ಟರ ಚೆಂದ
ಕಸ್ತೂರಿ ಕಿಸೆವಾಸನ ದುಂದ ಸೊಬಾನ
ಬಂಗಾರ ಬೇತಾಲಿ ಉಂಗುರ ಕೂದಲ
ಕಾಮಿನ ಬಿಲ್ ಮೂಡಿದಂಗ ಸೊಬಾನ

**ಹಾಡು ೬**

ಆರುತಿ ಬೆಳಗುವೆ ಪಾದಕ ಎರಗುವೆ
ಬಂದಂತ ಕಂಟಕ ಬಯಲು ಮಾಡುವ ತಾಯವ್ವಗ
ಎತ್ತುವೆನಾರುತಿಯ ॥ ರಾ ॥
ಮೂರ ಹೊತ್ತಿನ ಪೂಜೆ ಮಾಡಿಯ ಮಲ್ಲಿಗೆದಂಡೆ
ರುದ್ರಾಕ್ಷಿ ಜಪಮನಿ ತಪಮಾಡುವ ತಾಯವ್ವಗೆ
ಎತ್ತುವೆನಾರುತಿಯ ॥ ೨ ॥

ಉಡಿಯಕ್ಕಿ ಸ್ವಾಮಾನಾ ಬಗಡಿರುವ ನೆಲ್ಲಕ್ಕಿ
ಕಾಯಿ ಕರ್ಪೂರ ತೊಟ್ಟ ವಾಲಿ ತೌಡೊಂದು
ಒಳಗಿಟ್ಟು ಬೆಳಗುವೆನಾರುತಿಯ ಈ ಚೆಂಗಳವ್ವಗ
ದೇಶಕಧಿಕವಾದ ವಾಸುಳ್ಳ ಯಂಡಿಗೇರಿ ಸ್ವಾಮಿ
ಲಿಂಗನಪತಿ ಶರಣಿ ಚಂಗಳವ್ವಗ ಎತ್ತುವೇ ನಾರುತಿಯ

**ಹಾಡು ೭**

ಚಿಕ್ಕಿ ಸೀರೆಯುಟ್ಟು
ಚಿಲಕದ ಬೊಟ್ಟ ಇಟ್ಟು
ಚಿತ್ತಾದೇವಿಗೆ ಬೆಳಕಿಲೇ ಬಿತ್ತಿಸಿ
ಕುಂತಾಳವ್ವ ಮಹಾಲಕ್ಷ್ಮೀ ನಿಜ ಬೆಳಗಿರಾರುತಿಯ
ಹರಹರ ಎನ್ನುತಲೇ ಎತ್ತಿರಾರುತಿಯ ॥ ೧ ॥

ಗಂಜಿ ಸೀರಿಯುಟ್ಟು
ಗಂಧದ ಬೊಟ್ಟ ಇಟ್ಟು
ನಂದಾ ದೀವಿಗೆ ಬೆಳಕಿಲೇ
ಚಿಂತಿಸಿ ಕುಂತಾಳವ್ವಾ ಮಹಾಲಕ್ಷ್ಮೀ
ನಿಜ ಬೆಳಗಿರಾರುತಿಯ ಹರಹರ ಎನ್ನುತ್ತಲೆತ್ತಿರಾರುತಿಯ ॥ ೨ ॥

ಸಾದಿನಿ ಸೀರೆಯುಟ್ಟು
ಸಾಲದ ಬೊಟ್ಟು ಇಟ್ಟು
ಸಾಲದ ದೇವಿಗೆ ಬೆಳಕಿಲೇ
ಚಿಂತಿಸಿ ಕುಂತಾಳ ಮಹಾಲಕ್ಷ್ಮಿ
ಹರಹರ ಎನ್ನುತಲೆತ್ತಿರಾರುತಿಯ
ನಿಜ ಬೆಳಗಿರಾರುತಿಯ ‖ ೩ ‖

ಕಾಲಲ್ಲಿ ಕಾಲುಂಗರ ಕಾಲಸರಪಳಿ
ಮತ್ತು ನಡುವಿನ ಡಾಬ ಗುಂಡಮುಗಳು
ದಾಳೆ ಜಂಗ ಬಾಳೆಮನೆ ಚಂದಾಗಿ ಮಹಾಲಕ್ಷ್ಮಿ ಕೊರಳಲ್ಲಿ
ಮೂಗುತಿ ಮುತ್ತ ಮಾವಾರವಾಲಿ
ಕಾಣಬಾವಲೆ ಮತ್ತು ಮೀನಬಾಲ್ವಿ
ಚಂದಾಗಿ ಮಹಾಲಕ್ಷ್ಮಿ ಹಣೆಯಲ್ಲಿ
ನಿಜ ಬೆಳಗಿರಾರುತಿಯ ಹರಹರ ಎನ್ನುತಲೇ
ಎತ್ತಿರಾರುತಿಯ ‖ ೪ ‖



**ಹಾಡು ೮ – ಡೊಳ್ಳಿನ ಪದ**

ಭಕ್ತಿಯ ಸಾರ ಕೇಳ್ರಿ ಬಲ್ಲವರಾ
ಚಾಂಗುನಿ ಅಂತವರ ಇಲ್ಲ ಯಾರ್‍ಯಾರು।
ಕೇಳಿದರ ನಿಮ್ಮ ಕಣ್ಣಾಗ ನೀರು। ಭಕ್ತಿ ನೋಡುದಕೆ
ಬಂದನಾ ಭಗವಂತ। ಸಾಕ್ಷಾತ್ ಶಂಕರಾ ‖ ೧ ‖

ಊಟಕ ಮಾಡರೆಂದು ಹೇಳಿದ ಶ್ರೀಹರಾ।
ಬಾಯಿ ಸವಳನಂದು ಆಗೈತಿ ಭಯಂಕರಾ।
ನಿನ್ನ ಮಗನ ಕೊಯಿರಿ ಎಂದ ನಿಷ್ಠುರಾ।
ಅವಸರ ಅಡಗಿ ಮಾಡಿ ನೀಡಿ ತಾಯಿ ಹಸ್ತೀನ್ರಿ ಭಯಂಕರಾ ‖ ೨ ‖

ಚಾಂಗುನಿ ದೇವಿಗೆ ಇರುದೊಂದು ಪುತ್ರಾ।
ಶೋಕ ಮಾಡುತಾಳ ಬಂದು ಕಣ್ಣಿರಾ।
ಹೆಂತಾ ಹೊತ್ತಾ ತಂದಿದಿ ಈಶ್ವರಾ।
ಹೊಟ್ಟೀಲೇ ಹುಟ್ಟಿದ ಮಗನ ಹೆಂಗ ಕೊಲ್ಲಲೆಂದ
ಮರಗತಾಳ ಮರಾಮರಾ ‖ ೩ ‖

ಚಾಂಗುನಿ ಪುತ್ರಾ ಚಿಲ್ಲಾಳ ಹೆಸರಾ।
ಅವನ ರೂಪ ಇತ್ತ ಚೆಲುವ ಚಂದಿರಾ।
ಕೋದ ಅಡಗಿ ಮಾಡಂದ ಅವಸರಾ।
ಶಾಲಿಗಿ ಹೋದ ಮಗನ ಕರಸಿಕೊಳ್ಳುವುದು ಬಂದಿತ ಅನಿವಾರ ॥ ೪ ॥

ಶಾಲಿಗೆ ಹೋದ ಮಗ ಬಂದ ಸುಕುಮಾರಾ
ಕುತಗಿ ಕೊಯ್ಯ ಎಂದ ಹೇಳಿದ ಶ್ರೀಹರಾ
ಚಾಂಗುನಿ ದೇವಿಯ ಜೀವಕ ಬಂತಗೋರಾ
ಮನಪಾಕದಡಗಿ ಮಾಡಿ ನೀಡತಾಯಿ
ಅಂತಾನ ಮಹಾದೇವರಾ ॥ ೫ ॥

ಕೈಕಾಲ ಕಟ್ಟಿ ಶಿರಾ ಕೊಯಿದಾಳ ಅವಸರಾ
ಕಾರಂಜಿ ಪುಟದಂಗ ಜೀಗದೀತ ನೆತ್ತರಾ
ಮಾಂಸ ಕೊಯ್ದು ಮಾಡ್ಯಾಳ ಚುರಚೊರಾ
ಪಂಚ ಪಕವಾನದಡಗಿ ಆದಿತು ತಯಾರ ಎಡೆಮಾಡಿ ಇಟ್ಟಾರ ॥ ೬ ॥

ಊಟ ಮಾಡರೆಂದು ಕರಿದಾಳ ತೀವ್ರಾ।
ತಲಿಕುಟ್ಟಿ ಚಟ್ನಿ ಮಾಡ್ಯಾಳ ಮಧುರಾ।
ಯಾರಿಗೆ ತಿಳಿದಿಲ್ಲಾ ಶಿವನ ತಂತ್ರಾ।
ಆಸನ ಮ್ಯಾಲಿ ಕುಂಡರಿಸಿ ಊಟಕೆ ನೀಡಿದಾಳ
ಉನ್ನುದಿಲ್ಲಾ ಅಂತಾರ ಶ್ರೀಹರಾ ॥ ೭ ॥
ಒಬ್ಬನ ಎಂದೆಂದು ಉನ್ನುದಿಲ್ಲಾ ಅಂತಾರಾ
ಜೋಡಿ ಪಂತಿಲೇ ಬೇಕು ಇನ್ನೋಬ್ಬರಾ
ಇರುದೊಂದು ಮಗ ಇದ್ದ ಸುಕುಮಾರಾ
ನಿನ್ನ ಸಲುವಾಗಿ ಅಡಗಿ ಮಾಡಿಟ್ಟುನ್ನುವಗೋಸ್ಕರಾ ॥ ೮ ॥

ಹೊರಗ ಹೋಗಿ ಕರಿ ಎಂದು ಹೇಳಿದ ಶಂಕರಾ।
ಆಸನ ಮ್ಯಾಲೆ ಕುಂತ ಹಾಕಿದ ಜೈಕಾರ।
ಚಿಲ್ಲಾಳಂತ ವದರತಾಳ ಜೋರಾ।
ಸಾಲಿಗೆ ಹೋದ ಮಗ ಓಡಿ ಬಂದಾನೋ ಹೆಂತಾ ವಿಚಿತ್ರ ॥ ೯ ॥

ಊಟಕ ಕರಕೊಂಡ ಕುಳಿತಾನ ಶ್ರೀಹರಾ।
ಮೌಂಸ ಮಲ್ಲಿಗೆ ಹೊವ ಆದಿತಪೂರಾ।
ಚಾಂಗುನಿದೇವಿ ಮಾಡಿ ಶಿವನ ಸ್ತೋತ್ರ।
ಸ್ವರ್ಗಕ ಹೋದ ಕತಿಯ ಮುಂದ ಹೇಳತಿವಿ ಕೇಳರಿ ಬಲ್ಲವರಾ ॥ ೧೦ ॥

ಚಾಂಗುನಿ ಒಂದಿನಾ ಸ್ವರ್ಗಕೆ ಹೊಂಟಾಗ।
ಹಾದ್ಯಾಗ ಶಿವಧೂತರು ಅಲ್ಲಿ ತರಿಬ್ಯಾರು।
ಬಿಡು ದೇವ ಅಂತಾಳ ನನ್ನ ಪದರಾ।
ನನ್ನ ಮಗನಕೊಂದ ಅಡಗಿ ಮಾಡಿನಿ ಶಂಕರನಿಗೋಸ್ಕರ ॥ ೧೧ ॥

ನನ್ನ ಮಗ ಎಂದಗೋಸ್ಕರಾ
ರುದ್ರಪಠನ ಕೆಟ್ಟ ಅಂತಾರಾ
ನರಕಕ ಹೋಗಂದ ಶ್ರೀಹರಾ
ಹೆಂತಿಂತವರಿಗೆ ಹಿಂತಾ ಹೊತ್ತು ಬಂದಿತು ಯಾರೇನು -
ಮಾಡುವರಾ ॥ ೧೨ ॥

ಮಾಂಸ ಉನಿಸಿದೆನೆಂದು ಅಂದಾಳು ನಿಷ್ಠುರಾ
ಶಾಪ ಕೊಟ್ಟಾನೇ ಸಾಕ್ಷಾತ್ ಶಂಕರಾ।
ತೊಗಲಬಾವಲಿ ಚಾಂಗುನಿ ಅವತಾರ।
ಉಂಡಬಾಯಿಲೆ ಕಾರಿಸಿಕೊಂಡಾನೋ।
ಹೇಳಿದವ ರಾಮಚಂದ್ರ ॥ ೧೩ ॥

**ಹಾಡು ೯**

ಸಣ್ಣ ಸ್ವಾಮಾರದಿನ ಮನಿಯ ಸಾರಸತಿದ್ದೆ
ಭಿಕ್ಷೆ ಭಿಕ್ಷೆ ಅಂತ ಬಂದಾರ ॥ ಪ ॥
ಬ್ಯಾಳಿಯ ನೀಡತಿ ಸ್ವಾಮಿ ಬೆಲ್ಲವ್ವ ನೀಡಲೋ
ಮತ್ತೇನ ನೀಡಲೇ ಅಣ್ಣಯ್ಯಸ್ವಾಮೀ। ಸೋ ನಿಂಗವಾ।
ಬ್ಯಾಳಿಯ ನಾನೊಲ್ಲೆ ಬೆಲ್ಲವ ನಾನೊಲ್ಲೇ
ಇರೊ ಒಬ್ಬ ಮಗನ್ನ ಬಿನ್ನಾಯ ಮಾಡೋ ಚಂಗಳದೇವಿ
ಸೋಲಿಂಗವಾ ಸೋ.

ಇರೋ ಒಬ್ಬ ಮಗ ಶಾಲಿಗೆ ಹೋಗ್ಯಾನ ಇನ್ನೇಲ್ಲಿ ತರಲೋ
ಹುಚ್ಚ ಜಂಗಮರಾ ಸೋವಯ್ಯಾ ಲಿಂಗವಾ ಸೋ
ಬಡ ಬಡ ಹೋಗವ್ವ ಶಾಲೆಗೆ ಕಳುವಹರು
ಮಾಸ್ತರ ಮನೆಗೆ ಸೋವಯ್ಯಾ ಲಿಂಗವಾ ಸೋ
ಎಡಗೈಯಲ್ಲಿ ಲೇಖ್ಖನಿಕಿ ಬಲಗೈಲಿ ಪಾಟಿಗಂಟು
ತಾಯಿ ಮುಂದ ಮುಂದ ಬಂದಾನೋ ಚೆಲ್ಲಾಳ ಸೋಲಿಂಗವಾ ಸೋ.

ಎಡಗೈ ಹಿಂದಕಮಾಡಿ ಬಲಗೈಯಿ ಮುಂದಕ ಮಾಡಿ
ಕುಂಬಳಕಾಯಿ ಮಾಡಿ ಕಡಿದಾಳೋ ಮಗವಿನ್ನ ಸೋ ಲಿಂಗವಾ ಸೋ.
ಅಡಗಿಯಾಗಿದೆ ಗುರುವೆ ನೀರು ಕಾಯ್ದಿದೆ ಗುರುವೇ
ಊಟ ಮಾಡಿ ಹೋಗ್ರೀ ಉಚ್ಚ ಜಂಗಮರೇ ಸೋ ಲಿಂಗವಾ ಸೋ
ನಿನ್ನ ಪುತ್ರಣ್ಣ ಕರಿಯೇ ಚಂಗಳಾದೇವಿ
ಇರೋ ಒಬ್ಬ ಮಗನ್ನಾ ಬಿನ್ನಾಯ ಮಾಡಿರಿ
ಇನ್ನೆಲ್ಲಿ ತರಲಿ ಉಚ್ಚಜಂಗಮರೇ ಸೋ ಲಿಂಗವಾ ಸೋ
ಆಚೆ ಮೂಲಿ ಬೀಡು ಈಚೆ ಮೂಲಿ ಬೀಡು
ನಡುಮನಿಯಲ್ಲಿ ನಿಂತ ಕರಿಯವ್ವಾ ಮಗುವಿನ್ನ ಸೋ ಲಿಂಗವಾ ಸೋ
ಗಿಲ್ಲಾಂತ ಬಂದಾಮ ಎಣ್ಣಕುಮಾರ ಸೋ ಲಿಂಗವಾ ಸೋ

**ಹಾಡು ೧೦**

ಸಣ್ಣ ಸ್ವಾಮಾರಲಿನಾ ಮನೆಯ ಸಾರಸತಿದ್ದೆ
ಭೀಕ್ಷೆ ಭೀಕ್ಷೆಯಂತ ಬಂದಾರ ಉಚ್ಚಜಂಗಮರ
ಸುವಯ್ಯ ಲಿಂಗವ ಸುವಯ್ಯಾ ॥ ೧ ॥

ಬ್ಯಾಳಿ ನೀಡಲಿಸ್ವಾಮಿ ಬೆಲ್ಲ ನೀಡಲಿಸ್ವಾಮೀ
ಮತ್ತೇನು ನೀಡಲಿ ಉಚ್ಚಜಂಗಮರ
ಸುವಯ್ಯಾ ಲಿಂಗನ ಸುವಯ್ಯಾ ॥ ೨ ॥

ಬ್ಯಾಳಿನೊ ನಾನೊಲ್ಲೆ ಬೆಲ್ಲವ ನಾನೊಲ್ಲೆ
ಇದ್ದ ಪುತ್ರನ ಕೊಯ್ದು ಬಿನ್ನಾಯಿ ಮಾಡಂದ
ಸುವಯ್ಯಾ ಲಿಂಗದ ಸುವಯ್ಯಾ ॥ ೩ ॥

ಪುತ್ರನ ಕೊಯ್ಯ ಬಿನ್ನಾಯ ಮಾಡ ಚಂಗಳಾ
ಇರು ಒಬ್ಬ ಮಗಾ ಶಾಲಿಗೆ ಹೋಗ್ಯಾನ ಜಾನ
ಇನ್ನೇಲಿ ತರಲಿ ಉಚ್ಚ ಜಂಗಮರ
ಸುವಯ್ಯಾ ಲಿಂಗವ ಸುವಯ್ಯಾ ॥ ೪ ॥

ಬಡಬಡ ಹೋಗವ್ವ ಶಾಲಿಗೆ ನಿಂದರವ್ವ
ಶಾಲಿಮಾಸ್ತರ ಕಳವಯ್ಯಾ ಮಗನ
ಸುವಯ್ಯಾ ಲಿಂಗವ್ವ ಸುವಯ್ಯಾ ॥ ೫ ॥

ಎಡಗೈಯಾಗ ಪಾಟಿಗಂಟು ಬಲಗೈಯಾಗ ಲೆಖ್ಖನಕಿ
ತಾಯಿ ಮುಂದ ಮುಂದ ಬಂದಾನ ಚೆಲ್ಲಾಳ
ಸುವಯ್ಯಾ ಲಿಂಗದ ಸುವಯ್ಯಾ ॥ ೬ ॥

ಕುಂಬಳಕಾಯಿ ಕೊಯ್ದುಳಾ ಹೋಳಿ
ಸುವಯ್ಯಾ ಲಿಂಗದ ಸುವಯ್ಯಾ ॥ ೭ ॥

ಹಿರಿಕಾಯಿ ಮಾಡಿ ಹೇರಿಚಾಳ ಮಗನ
ಸುವಯ್ಯಾ ಲಿಂಗದ ಸುವಯ್ಯಾ ॥ ೮ ॥
ಅಡಗಿ ಆಗೆದ ಗುರುವೆ
ನೀರ ಕಾಯದವಾ ಗುರುವೆ
ಊಟ ಮಾಡಿರಿ ಉಚ್ಚ ಜಂಗಮರ
ಸುವಯ್ಯಾ ಲಿಂಗದ ಸುವಯ್ಯಾ ॥ ೯ ॥

ನಿನ್ನ ಪುತ್ರನ ಕರಿಯ ಚಂಗಳಾದೇವಿ
ಸುವಯ್ಯಾ ಲಿಂಗದ ಸುವಯ್ಯಾ ॥ ೧೦ ॥

ಇರೋ ಒಬ್ಬ ಮಗನ ಬಿನ್ನಾಯಿ ಮಾಡಿನಿ
ಇನ್ನೇಲಿ ತರಲಿ ಉಚ್ಚಜಂಗಮಾರ
ಸುವಯ್ಯಾ ಲಿಂಗದ ಸುವಯ್ಯಾ ॥ ೧೧ ॥

ಆಚೆ ಮೂಲಿ ಬಿಡು ಇತಿ ಮೂಲಿ ಬೀಡು
ನಡು ಮನ್ಯಾಗ ನಿಂತ ಕರಿಯವ್ವ ಚಂಗುಳಿ
ಸುವಯ್ಯಾ ಲಿಂಗದ ಸುವಯ್ಯಾ ॥ ೧೨ ॥

ಗಿಲ್ಲಂತ ಬಂದ ನನ್ನ ಕುವರ
ಸುವಯ್ಯಾ ಲಿಂಗದ ಸುವಯ್ಯಾ

**ಹಾಡು ೧೧**

ಸತ್ಯ ಚಂಗಳಕವ್ವನ ಭಜನೆ ನಿತ್ಯನಾವು ಮಾಡೋನವ್ವ
ಸತ್ಯ ಚಂಗಳಕವ್ವನ ಕೂಡ ಸಾಹಿಹೊದಿನವ್ವ | ಓಂ ಶಿವಾಯ
ಆರು ಮೂರು ಒಟ್ಟಿ ಬಳ್ಳಗೆ ಹಾಕಿನವ್ವ ನಾನು
ಬಳ್ಳಿ ಗಾಕಿನವ್ವ ಆರು ಮೂರು ಒಬ್ಬಿ ಬಳ್ಳಿ ನುಂಗಿತವ್ವ | ಓಂ ಶಿವಾಯ
ಆರು ಮೂರು ಒಬ್ಬಿ ಬಳ್ಳಿ ನುಂಗಿತವ್ವಾ
ಆರು ಚಕ್ರದಗೊಳಾ ಮ್ಯಾಲಿಕೆ ಏರಿಂದನವ್ವ | ಓಂ ಶಿವಾಯ

ಆರು ಚಕ್ರದಗೊಳಾ ಮಾಲಿಕ ಏರಿದನವ್ವ ಇವಾ
ಆರು ಚಕ್ರದಾಗಿನ ಬೋದಾ ತಿಳಿದನವ್ವ ನಾನು
ಬೋದಾ ತಿಳಿದ ಮ್ಯಾಲೆ ಬಾದನಿಲ್ಲವ್ವಾ | ಓಂ ಶಿವಾಯ
ಬೋದಾ ತಿಳಿದ ಮ್ಯಾಲೆ ಬಾದನಿಲ್ಲವ್ವಾ ಇರು ಬಾದನಿಲ್ಲವ್ವ
ರಾಯ ರಾಯರ ಕೂಡಿ ನ್ಯಾಯ ನ್ಯಾಯ ಹೇಳರವ್ವಾ | ಓಂ ಶಿವಾಯ
ರಾಯ ರಾಯರ ಕೂಡಿ ನ್ಯಾಯವ ಹೇಳಿಯಾರವ್ವ ಇವರು
ನ್ಯಾಯದಗಾರನ್ನ ಮಾಯನಾದನವ್ವ | ಓಂ ಶಿವಾಯ
ನ್ಯಾಯದಗಾರನ್ನ ಮಾಯನಾಗಾನವ್ವ ಇವಾ ಮಾಯಾನಾಗೆನವ್ವ
ಧರೆಯೋಳು ಚಂಗಳವ್ವ ಪಾದಕ ಹೊಂದಿದನವ್ವ | ಓಂ ಶಿವಾಯ
ಧರೆಯೋಳು ಚಂಗಳಕವ್ವನ ಪಾದಕ ಹೊಂದಿದರವ್ವ
ಪಾದಕ ಹೊಂದಿದ ಮ್ಯಾಲೆ ಪಾವನನಾದೆನವ್ವ | ಓಂ ಶಿವಾಯ

**ಹಾಡು ೧೨**

ಸಿರಿ ಪ್ರಬಲದನ್ನ ಕೊರದ ಕೊಬ್ಬರಿ ಗಿಟಕ
ಮತಿಕುಲದ ಮಾವಿನ ಹಣ್ಣ ಕಾಶಿ ಪ್ರಬಲದನ್ನ
ಸೀರೆಯ ಉಡಿಸುವೆನು ಈ ಚೆಂಗಳವ್ವಗ || ೧ ||

ಕುಬಸ ಪ್ರಬಲದನ್ನ ಕೊರದ ಕೊಬ್ಬರ ಗಿಟಕ
ಮತಿ ಕುಲದ ಮಾವಿನ ಹಣ್ಣ ಕಾಶಿ ಪ್ರಬಲದನ್ನ
ಗಂಧವ ಹಚ್ಚುವೆನು ಈ ಚೆಂಗಳವ್ವಗ || ೨ ||

ಗಂಧ ಪ್ರಬಲದನ್ನ ಕೊರೆದ ಕೊಬ್ಬರಿ ಗಿಟಕ
ಮತಿಕುಲದ ಮಾವಿನ ಹಣ್ಣ ಕಾಶಿ ಪ್ರಬಲದನ್ನ
ಗಂಧವ ಹಚ್ಚುವೆನು ಈ ಚೆಂಗಳವ್ವಗ || ೩ ||

ಅರಿಷಿಣ ಪ್ರಬಲದನ್ನ ಕೊರೆದ ಕೊಬ್ಬರಿ ಗಿಟಕ
ಮತಿಕುಲದ ಮಾವಿನ ಹಣ್ಣ ಕಾಶಿ ಪ್ರಬಲದನ್ನ
ಅರಿಷಿಣ ಹೆಚ್ಚುವೆನು ಈ ಚೆಂಗಳವ್ವಗ || ೪ ||

ಕುಂಕುಮ ಪ್ರಬಲದನ್ನ ಕೊರೆದ ಕೊಬ್ಬರಿ ಗಿಟಕ
ಮತಿಕುಲದ ಮಾವಿನ ಹಣ್ಣ ಕಾಶಿ ಪ್ರಬಲದನ್ನ
ಕುಂಕುಮ ಹಚ್ಚುವೆನು ಈ ಚೆಂಗಳಕವ್ವಗ || ೫ ||

ಬಾಳಿ ಪ್ರಬಲದನ್ನ ಕೊರೆದ ಕೊಬ್ಬರಿ ಗಿಟಕ
ಮತಿಕುಲದ ಮಾವಿನ ಹಣ್ಣ ಕಾಶಿ ಪ್ರಬಲದನ್ನ
ಉಡಿಯನು ತುಂಬುವೇನ ಈ ಚೆಂಗಳವ್ವಗ ॥ ೬ ॥

ದಂಡೆ ಪ್ರಬಲದನ್ನ ಕೊರೆದ ಕೊಬ್ಬರಿ ಗಿಟಕ
ಮತಿಪುರದ ಮಾವಿನ ಹಣ್ಣ ಕಾಶಿ ಪ್ರಬಲದನ್ನ
ದಂಡೆಯ ಕಟ್ಟುವೇನು ಈ ಚೆಂಗಳವ್ವಗ ॥ ೭ ॥

**ಹಾಡು ೧೩**

ವಿಭೂತಿ ಹಚ್ಚಿದರ ಈರಾನ ಸುರ್‍ಯಾಗ
ಈರನಾಳವರ ಮಡದೆ
ಈರನಾಳವರ ಮಡದಿಗೇ ಚೆಂಗಳಕವ್ವಗ
ವಿಭೂತಿ ಹಚ್ಯಾ್ರರ ಶುಭದಿಂದ ಸೋ
ಕುಂಕುಮ ಹಚ್ಚಿರಿ ನನ್ನ ಕುಶಲದಾಗ ಚೆಂಗಳೆಗೆ
ಕುಷಿಯನಾಳವ ಮಡದಿಗೆ ಸೋ
ಕುಷಿಯನಾಳವರ ಮಡದಿಗೆ ಸೋ
ಕುಷಿಯ ನೀನಾಳವರ ಮಡದಿ ನೀ ಚೆಂಗಳವ್ವಗ
ಕುಂಕುಮ ಹಚ್ಚಿದ ಶುಭದಿಂದ ಸೋ ॥ ೧ ॥

ಗಂಧ ಹಚ್ಚಿರಿ ನನ್ನ ಮಂದ ಗನ್ನಾಕಿಗೆ
ಗಾಲನಾಳವರ ಮಡದಿಗೆ
ಗಾಲನಾಳನೀ ಆಳವರ ಮಡದಿನೀ ಚೆಂಗಳವ್ವಗ
ಗಂಧ ಹಚ್ಚಿರೀ ಶುಭದಿಂದ ಸೋ ॥ ೨ ॥

ಅರಿಷಿನ ಹಚ್ಚಿರಿ ನನ್ನ ಸರಸ ಗನ್ನಾಕಿಗೆ
ಸರಸನಾಳವರ ಮಡದಿಗೆ
ಸರಸನೀನಾಳವರ ಮಡದಿಗೆ ಚೆಂಗಳಕವ್ವಗ
ಅರಿಷಿನ ಹಚ್ಚಿರಿ ಶುಭದಿಂದ ಸೋ ॥ ೩ ॥

ದಂಡಿ ಕಟ್ಟರಿ ನನ್ನ ದುಂಡ ಮಾರ್‍ಯಾಕಿಗೆ
ದಂಡಿನಾಳವರ ಮಡದಿಗೆ
ದಂಡನೀನಾಳವರ ಮಡದಿಗೆ ಚೆಂಗಳವ್ವಗೆ
ದಂಡಿ ಕಟ್ಟಿಲಿ ಶುಭದಿಂದ ಸೋ ॥ ೪ ॥

ಉಡಿಯ ತುಂಬಿರಿ ನನ್ನ ಒಡಲಗನ್ನಾಕಿಗೆ
ಒಡೆಯೆನಾಳವರ ಮಡದಿಗೆ
ಒಡೆಯ ನೀನಾಳವರ ಮಡದಿಗೆ ಚೆಂಗಳವ್ವಗ
ಉಡಿಯ ತುಂಬಿರಿ ಶುಭದಿಂದ ಸೋ ॥ ೫ ॥

(೪)

**ಹಾಡು ೧೪ – ಗೀಗೀ ಪದ**

ಭಕ್ತಿ ಇದ್ದವರಿಗೆ ಮುಕ್ತಿ ಆಗುವದು
ಭಕ್ತಿ ಇಲ್ಲದವ ನರಕ ಸ್ವಾದೀನಾ
ಭಕ್ತಿಯಿಂದ ಶಕ್ತಿ ಸರ್ವ ಸಾಧನಾ ॥
ಕಾಂಚಿಪುರದ ಸಿರಿಯಾಳನ ಭಕ್ತಿ
ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನಾ ॥
ಶಿವಾ ಪಾರ್ವತಿ ಆನಂದದಲ್ಲಿ ತಾವು
ಏರಿಕೊಂಡು ಕೂತಾರ ಸದನಾ
ತಂಬೂರಿ ನಾದ ಆತ ಜನನನಾ ॥
ತ್ರಿಲೋಕ ಸಂಚಾರಿ ನಾರದಮುನಿ ಬಂದ
ಜೋಡಿಸಿ ನಿಂತ ಎರಡು ಕೈಗಳನು
ಮಾಡಿ ಮುಜರಿಯನಾ ॥
ಶಿವಾ ಪಾರ್ವತಿ ಪ್ರೀತಿಲಿ ಕೂಡಿಸಿ
ಪ್ರಶ್ನೆ ಮಾಡತಾರ ನಾರದನ್ನಾ
ನಿಮ್ಮ ಭೆಟ್ಟಿಯಾಗಿದ್ದಿಲ್ಲ ಬಾಳದಿನಾ ॥
ಯಾವ ಕಡಿಂದ ಬಂದ್ರಿ ಏನ ಸಮಾಚಾರ ತಂದ್ರಿ
ಚಂದದಿಂದ ಮಾಡರಿ ಕಥನಾ
ಇನ್ನ ಯಾವ ಕಡೆ ನಿಮ್ಮ ಗಮನಾ ॥
ಮೃತ್ಯ ಲೋಕವೆಲ್ಲಾ ಸುತ್ತ ಹಾದ ಬನ್ನಿ
ಕಾಂಚಿಪುರ ಅಂಬೋದು ರಾಜಪಟ್ಟಣಾ
ಅದು ಸಿರಿಯಾಳ ಅರಸನ ಸ್ವಾದೀನಾ ॥
ಚೆಂಗಳಿ ಅವರ ಸತಿ ತಕ್ಕಂತ ಒಳ್ಳೆ ಗರತಿ
ಚಿಲ್ಲಾಳ ಅಂಬುವವ ಮಗನಾ
ಸತ್ಯತ್ವದಲ್ಲಿ ಪ್ರಜಾಪಾಲನಾ ॥

**ಒಂದನೇ ಚಾಲ**

ಅತಿಥಿಗಳಿಗೆ ದಿನಾದಿನಾ ಹಾಕತಾನ ಅನ್ನಾ

ಅರವಿ ಕೊಡತಾನು

ಸತ್ಕಾರ್ಯ ಸದಾ ಲೋಲನು ॥

ಕಾಂಚಿಪುರಕ ಅನಬೇಕ ಕೈಲಾಸ ನೋಡಿ

ಆಚಹರುಕ ಮಾಡುತ ಸದಾಶಿವಧ್ಯಾನ

ಎಲ್ಲಿ ಕೇಳಿದಲ್ಲಿ ಕೀರ್ತನಾ ॥

ಯಾರು ಇಲ್ಲ ನೋಡಿ ಅವನಸರಿ ಸುಳ್ಳ ಅಂದೇರಿ

ಐತಿ ಇಲ್ಲೇನಾ

ಹೋಗಿ ನೋಡಿ ಬದ್ರೀ ಒಂದದಿನಾ ॥

**ಎರಡನೇ ಚಾಲ**

ಶಿವಾ ಅಂದ ನಾರದ ಮುನಿ ಮುಂದಾ

ಕಾಂಚಿಪುರಕ ಹೋಗುವೆ ನಾನು ಇಂದಾ ॥

ಭಕ್ತಿ ಪರೀಕ್ಷೆ ಮಾಡುವೆ ಅತಂದಾ

ಜಂಗಮ ವೇಷ ಶಿವಾ ಧರಿಸೀದಾ ॥

ಮೃತ್ಯ ಲೋಕ ಮಾರ್ಗ ಹಿಡಿದ ನಡದಾ

ಕೈಲಾಸದಿಂದ ಕಾಂಚಿಪುರಕ ಬಂದಾ ॥

**ಏರ**

ಕೆಟ್ಟ ವೇಷ ಮೈ ಗಾಯ ತುಂಬಿತ್ತು

ರಕ್ತ ಕೀಂವ ಇಪ್ಪಿಯ ನೊಣಾ

ಜೊಲ್ಲ ಸೋರತ್ತಿತ್ತ ಇಲ್ಲರಿ ಹಸನಾ

ಪಿಚ್ಚ ಮತ್ತ ಹಾಗಿ ಎರಡು ಕಣ್ಣ ॥

ಕಾಂಚಿಪುರದ ಸಿರಿಯಾಳನ ಭಕ್ತಿ

ನೋಡಲಿಕ್ಕೆ ಬಂದ ಭಗವಾನಾ

ಆದ ಪ್ರಸನ್ನ ॥

ಅತಿಥಿ ಬಂದಿದೇನ ಅನ್ನಾ ನೀಡಿರೆಂದ

ಬದರತಿದ ವಾಡೆದ ಮುಂದಾ

ಹಸದೇನು ಅಂದಾ ॥

ನೋಡಿ ದ್ವಾರಪಾಲ ಓಡಿಹೋಗಿ ಆಗ

ತಿಳಿಸಿದಾನ ಅರಸನ ಮುಂದಾ

ಅವನ್ನ ಹಿಂದಕ್ಕೆ ಅಟ್ಟುವೆನಂದಾ ॥

ಕೆಟ್ಟಮಾರಿ ಹಿಂತಾ ಬಟ್ಟ ಹರಕನ್ನ

ನಾ ಎಂದೂ ನೋಡಿದಿಲ್ಲ ದುರ್ಗಂಧಾ

ನಾರುವುದಂದಾ ॥

ಕೆಟ್ಟಿ ಇದ್ದರ ಅಂವ ಸಿಟ್ಟಿಗೇಳ ಬ್ಯಾಡ

ಹಿಂದಕ್ಕೆಟ್ಟನೆ ಕರತಾ ಅಂದಾ

ಬಂದೀತ ಕುಂದಾ ॥
ಏಳುತ ಬೀಳೂತ ಬಗ್ಗಿ ಬಡಗಿ ಹಿಡಿದ
ಮುದಕ ನಿಂತಕೊಂಡಾನ ಬಂದಾ
ಅರಸನ ಮುಂದಾ ॥
ಅಕರಾತಿಲೆ ಅರಸ ಎತ್ತಿ ಕೊಂಡ
ತನ್ನ ಸಿಂಹಾಸನಕ ಇಳಿಸಿದಾ ಓದಾ
ಅರವಿಯ ಕಳದಾ ॥
ಸಿರಿಯೊಳ ಚೆಂಗಳ ಕೂಡಿ ಬಚ್ಚಲಕ ಓದು
ನಾನಾತರದ ತೈಲ ಮಕರಂದಾ
ಹಚ್ಯಾರು ತಂದಾ ॥
ಗಂದ ಕಸ್ತೂರಿ ಚೆಂದು ಬೆರಸಿ
ಜಳಕ ಮಾಡಿಸಿದಾರ ಮುದಕಂದಾ
ಆತ ಆನಂದಾ ॥

**ಒಂದನೇ ಚಾಲ**

ಕುಂಡರಸ್ಯಾರು ದೇವರ ಮನಿಯೊಳಗ ಗದ್ದಗಿಮ್ಯಾಗ
ಪರಿಮಳ ಪುಷ್ಪ ತರಿಸ್ಯಾನು
ಪಾದ ಪೂಜೆ ಮಾಡಿ ಕೇಳ್ಯಾನು ॥
ಏನ ಐತಿ ನಿಮ್ಮ ಇಷ್ಟಾರ್ಥ ಹೇಳರಿ ಸ್ಪಷ್ಟ
ಬೇಡಿದ್ದ ಕೊಡತೇನು
ಕೊಟ್ಟ ವಚನ ತಪ್ಪುವನಲ್ಲ ನಾನು ॥
ಬೇಕಷ್ಟ ಬೆಳ್ಳಿ ಬಂಗಾರ ರೊಕ್ಕದ ಭಂಡಾರ
ಅಲ್ಲದೆ ಮತ್ತು ಬೇಕೇನು
ಕಡಿಮಿಲ್ಲ ನನಗ ಏನೇನು ॥

**ಎರಡನೇ ಚಾಲ**

ಅತಿಥಿ ಅಂತಾನು ಇದು ಖಾಲಿ
ದ್ರವ್ಯ ಓದ ನಾಯೇನ ಮಾಡ್ಯಲಿ ॥
ನರಮೌಂಸ ಬೇಕೋ ಸದ್ಯದಲ್ಲಿ
ಇದು ನಿಚ್ಚ ತಿಳಿಯೋ ಮನದಲ್ಲಿ ॥
ಆಗದಿದ್ದರೆ ಹೇಳೋ ತೀವ್ರದಲ್ಲಿ
ಶಾಪ ಕೊಟ್ಟ ಹೋಗುವೆ ಕ್ಷಣದಲ್ಲಿ ॥

**ಎರ**

ಘಾತ ಆತ ಅಂದ ಹೋತ ವಚನ ನಂದ
ಸಿರಿಯಾಳ ಕರದ ತನ್ನ ನೌಕರನಾ

ತರಬೇಕೋ ಮನುಷ್ಯರ ಮೌಂಸವನಾ ॥
ಕಾಂಚಿಪುರದ ಸಿರಿಯಾಳನ ಭಕ್ತಿ
ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನಾ ॥
ಸಿರಿಯಾಳ ಅರಸ ತನ್ನ ಆಳಿಗೆ ತಿಳಿಸಿದ್ದು
ಸ್ವಾಮಿ ಕೂತ ಕೇಳ್ಯಾನು ಆಗ
ಅಂತಾನ ಹಿಂಗ ॥
ಅನ್ಯರ ಮೌಂಸ ನಾನು ಉಣಲೊಲ್ಲೆ ನಿಮ್ಮ
ಮಗನ ಮೌಂಸ ನೀಡರಿ ಬೇಗ
ಉಣ್ಣುವೆನೀಗ ॥
ಇಷ್ಟಕೇಳಿ ಅರಸ ನಿಷ್ಟುರಮಾಡಿ ಮನಸ
ಮಡದೀ ನೀ ಬಾ ಅಂದ ಚೆಂಗಳಿಗೆ
ಹೇಳ್ಯಾನು ಹಿಂಗ ॥
ಕೇಳಿ ಚೆಂಗಳಿ ಮೂರ್ಚೆ ಬಂದು
ಉರುಳಿ ಬಿದ್ದಾಳ ಧರಣಿಯ ಮ್ಯಾಗ
ಬಡದಿತ ದಿಂಗ ॥
ಬಿದ್ದ ಚಂಗಳಿ ಒದ್ದಾಡಿ ಎದ್ದ ಕುಂತ
ಶೋಕ ಮಾಡತಾಳ ಮನದಾಗ
ಏನ ಬಂತೋ ಶಂಭೋ ಶಂಕರ ನನಗ ॥
ಹೆತ್ತ ಕೂಸಿನ ಕುತ್ಗಿಕೊಯ್ದು
ತುತ್ತ ಮಾಡೋದಾತ ಜಂಗಮಗ
ಅಂತಾಳ ಹಿಂಗ ॥
ಸಿರಿಯಾಳ ಅರಸ ಆಗ ಸಮಾಧಾನ ಹೇಳಿ
ಮ್ಯಾಲ ಎಬ್ಬಿಸಿದ ಚಂಗಳಿಗೆ
ಶೋಕ ಮಾಡಬ್ಯಾಡ ನೀ ಈಗ ॥
ಸಿಟ್ಟಗೆದ್ದ ಅತಿಥಿ ಅಂತಾನ
ಹೊಟ್ಟೆ ಹಸಿವಿ ಆಗೇತಿ ನನಗೆ
ನೀಡಿರಿ ಬೇಗ ॥

**ಒಂದನೇ ಚಾಲ**

ಅತಿಥಿ ಆಡದಂದಾ ವಚನ ಒಪ್ಪಿಕೊಂಡತಾನ
ಮಗನ್ನ ಕರಿ ಅಂತಾ
ಚಂಗಳಿಗೆ ಹೇಳಿದಾ ತುರ್ತಾ ॥
ಲಗುಬಗಿ ಕಂದನ್ನ ಕರಿಸಿ ಚಂಡರುಂಡ ಕೊರೆಸಿ
ಮಾಡಿಸು ಅಡಗಿ ತುರ್ತಾ
ಇಷ್ಟಹೇಳಿ ಸುಮ್ಮನೇ ಕುಂತಾ ॥

**ಎರಡನೇ ಚಾಲ**

ಹೋಗಿ ನಿಂತಾಳು ಚಂಗಳಿ ಬಾಗಿಲಮುಂದಾ

ಎಲ್ಲಿ ಇರುವೆ ಚಿಲ್ಲಾಳಾ ಬಾರೋ ಕಂದಾ ||

ತಕ್ಷಣಕ ಮಗ ಅವ್ವಾ ಅಂದಾ

ಅಡಬಡಸಿ ಚಿಲ್ಲಾಳ ಓಡಿ ಬಂದಾ ||

ಡಂಡಗುಂಡಿನ ಆಟ ಒಳ್ಳೆದುಂದಾ

ಆಡೋ ಸರತಿ ಬಂದಿತ್ತು ಈಗ ನಂದಾ ||

**ಏರ**

ಗಂಟಲ ಬಿಗಿದು ದುಃಖವಟ್ಟರಿಸಿ

ತೆಕ್ಕಿಯೊಳಗ ಅಪ್ಪ್ಯಾಳ ಮಗನಾ

ಕುಂತಾಳ ಸುಮ್ಮನಾ ||

ಕಾಂಚಿಪುರದ ಸಿಯಾಳನ ಭಕ್ತಿ

ನೊಡಲಿಕೆ ಬಂದ ಭಗವಾನಾ

ಅದ ಪ್ರಸನ್ನಾ ||

ಯಾಕಕರದೆ ತಾಯಿ ಏನ ಕಾರಣ

ಶೋಕ ಮಾಡುವಿ ಚಿಂತಿ

ಅಳವುತ ಕುಂತಿ ||

ನಿನ್ನ ಶಿರಾ ಕೊಯ್ದು ಮಾಂಸದ ಅಡಗಿ

ಮಾಡಿ ನೀಡಿರೆಂದ ಅತಿಥಿ

ಇನ್ನೇನು ಗತಿ ||

ಮಗನ್ನ ಮೇಲಕ್ಕೆತ್ತಿ ಮುದ್ದಾಡಿ ಅಂತಾಳ

ನಿನ್ನ ಮುಖಾ ಇಂದಿಗೆ ಎರವಾತಿ

ನಮ್ಮನ್ನ ಮರತಿ ||

ಚಿಲ್ಲಾಳ ಅನ್ನೋ ಸಲ್ಲ ಇಲ್ಲದಾತೊ

ನಾ ತಿನಿಸಿ ಉಣಿಸಿ ಮಾಡಿನ್ನೊ ಪ್ರೀತಿ

ಒಳ್ಳೆ ಅಕ್ಕರತಿ ||

ಮಾತೆ ಕೇಳಿದು ಮಿಥ್ಯಾಶರೀರಾ

ಹುಟ್ಟೋದು ಸಾಯೋದು ನಡದೈತಿ

ಎಂದ ಬಿಟ್ಟೈತಿ ||

ಸತ್ಪಾತ್ರಕ್ಕ ನನ್ನ ದಾನಾ ನೀಡರಿ

ಮೂರು ಮಂದಿಗೆ ಆಗೋದು ಮುಕ್ತಿ

ಹಬ್ಬೀತು ಕೀರ್ತಿ ||

ಅಂದ ಚೆಂದದ ಮಾತ ಕಂದ ಆಡೋದು ಕೇಳಿ

ಶೋಕ ಮಾಡತಾಳ ಪತಿವರತಿ

ಮಾತ ಕೊಟ್ಟಿದಾನ ಪ್ರಾಣಪತಿ ||

ನಿಷ್ಠುರ ಮನಸ ಮಾಡಿ ನಿಂತಾಳ ಎದುರಿಗಿ
ವರಿಯ ಜಗ್ಗಿ ಹಿರಿದಾಳ ಕತ್ತಿ
ಕಡದಾಳ ಎತ್ತಿ ||

**ಒಂದನೇ ಚಾಲ**

ಕುಲು ಕುಲು ಕೂಸ ನಗವೂತ ಪ್ರಾಣಬಿಟ್ಟೀತ
ಸಣ್ಣ ಕಳಲಾ
ಮಾರಿ ಕಳಾಕಡಿಮಿ ಆಗಿಲ್ಲಾ ||
ಲಗುಬಗಿ ಕೂಸನ್ನ ಕೊಚ್ಚಿ ತೊಳದಾರು ಸ್ವಚ್ಚಿ
ಸಾಹಿತ್ಯ ಸರ್ವೆಲ್ಲಾ
ಕೂಡಿಸ್ಯಾರ ತಡಾ ಆಗಲಿಲ್ಲ ||
ತಗದಿಟ್ಟ ಕೊಂಡಾಳು ಚಂಡ ಮಾಡ್ಯಾಳ ಬರೆ ಮುಂಡ
ಮಗನ ಹಂಬಲಾ
ಅವಸರಲಿ ಅಡಗಿ ತಾತ್ಕಾಲಾ ||

**ಎರಡನೇ ಚಾಲ**

ಎಡಿ ಬಡಿಸಿ ಕೊಟ್ಟಾಳ ಸ್ವಾಮಿ ಮುಂದಾ
ಖೂನಾ ಹಿಡದ ಶಿವ ಸಿಟ್ಟಿಗೆದ್ದಾ ||
ಮುಂಡ ಉಂಡ ಬತಿಗೆಡೆನು ಅಂದಾ
ಚೆಂಡ ತಿನ್ನುವೆ ಮೊದಲ ತಾ ಅಂದಾ ||
ಇಟ್ಟಾಳ ಚಂಗಳೆ ಚಂಡ ತಂದಾ
ನೋಡಿ ಅತಿಥಿ ಅದಾನು ಆನಂದಾ ||

**ಏರ**

ಈ ಚೆಂಡ ಒಯ್ದು ಒಳಕಲ್ಲಿನೊಳಗ ಹಾಕಿ
ಒಣಕಿಲಿಂದ ಕುಟ್ಟೆರಿ ಇದನ್ನಾ
ಮಾಡತಿ ಸಣ್ಣಾ ||
ಕಾಂಚಿಪುರದ ಸಿರಿಯಾಳನ ಭಕ್ತಿ
ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನಾ ||
ಸಿರಿಯಾಳ ಚಂಗಳಿ ಚೆಂಡ ಕುಟ್ಟುವಾಗ
ಆನಂದದಲ್ಲಿ ಹಾಡ್ಯಾರ ಗೀತಾ
ಸ್ವಾಮಿ ಅದನ್ನ ಹಿಡದಾನ ಗುರತಾ ||
ಚೆಂಡ ರುಂಡ ಎರಡು ಕೂಡಿಸಿ ಕಲಸೋದು
ಶಿವಾ ನೋಡಿದಾನ ಕುಂತಾ
ಅಂತಾನ ಮಸ್ತಾ ||

ಮಗನ ಮೋಹದಲ್ಲಿ ನೀವು ದುಃಖ ಮಾಡಿದರ
ಊಟಕ್ಕೆ ನಾನು ಒಲ್ಲೇನು ಅಂತಾ
ಮೊದಲ ತಿಳಿಸಿದೇನ ಈ ಮಾತಾ ||
ಸರ್ವ ಕೆಲಸ ಪರಿಹಾರ ವಾದೀತ
ಮೂರು ಎಡಿಯ ಮಾಡರಿ ಕತುರಿತಾ
ತಗದಾನ ಬೇತಾ ||
ಅತಿಥಿ ಆಡಿದ್ದಕ್ಕೆ ಸಿರಿಯಾಳ ಅಂತಾನ
ಮೂರು ಎಡಿ ಯಾರ್‍ಯಾರಿಗಂತಾ
ಕೇಳ್ಯಾನು ಅಂಜುತಾ ||
ನಾನು ನೀನು ನಿನ್ನ ಮಡದಿ ಚಂಗಳಿ
ಮೂವರು ಕೂಡಿ ಉಣ್ಣೋನು ಕೂತಾ
ಆಗೋನು ಶಾಂತ ||
ಚಂಗಳಿ ಅಂತಾಳಾಗ ಹಡದ ಕೂಸನ್ನ
ಕಡಿದ ತಿನ್ನೋದ ಬಂದೀತ ಹೊತ್ತಾ
ದೇವಾ ಭಗವಂತಾ ||
ಅರಸನ ವಚನಾ ಅಲ್ಲಗಳಿಯಲಿಲ್ಲಾ
ಮೂರು ಎಡಿಯ ಮಾಡ್ಯಾಳ ತುರ್ತಾ
ಉಣ್ಣುವೆನಂತಾ ||

**ಒಂದನೆ ಚಾಲ**

ಎಡಿ ಬಿಟ್ಟ ಸ್ವಾಮಿ ಎದ್ದನಿಂತ ಹೋಗುವೆನು ಅಂತ
ಊಟ ಮಾಡೋದಿಲ್ಲಾ
ಅರಸ ಹಿಡಿದ ಅತಿಥಿಯ ಕಾಲಾ ||
ಸ್ವಾಮಿ ಏನಬಂತ ಸಂಕೋಚ ಹೇಳರಿ ಸ್ವಚ್ಚ
ಕೊಟ್ಟ ವಚನ ನಾನು ತಪ್ಪಿಲ್ಲಾ
ಇದು ಏನು ನನಗ ತಿಳಿಲಿಲ್ಲಾ ||
ಮಕ್ಕಳು ಇಲ್ಲದ ಮನಿಯಾಗ ಉಂಡಿಲ್ಲಯಾವಾಗ
ನಿಮ್ಮ ಮಗನ್ನ ಕರಿಯೋ ತಾತ್ಕಾಲಾ
ಉಣ್ಣುವೇನು ಆಮ್ಯಾಲಾ ||

**ಎರಡನೇ ಚಾಲ**

ನಿಮಗ ನೀಡೆವರಿ ಒಬ್ಬಮಗ ಇದ್ದಾ
ಇನ್ನ ಕರಿದರ ಬಂದಾನು ಎಲ್ಲಿಂದಾ ||
ಯಾವ ದೋಸ ಅಗಿಲ್ಲರಿ ನಮ್ಮಿಂದಾ
ತಿಳಿಸಿ ಹೇಳರಿ ಚೆಂದದಿಂದಾ ||

ಸಂಶೆ ಬಿಡರಿ ಮನಸಿನೊಳಗಿಂದಾ ||
ತಡಾ ಆದೀತು ಮಗನ್ನ ಕರೀರೆಂದಾ ||

**ಏರ**

ಅತಿಥಿ ಅಡಿದ ವಚನವ ಕೇಳಿ
ಕರಿಲಿಕ್ಕ ಹ್ವಾದಾಳು ಚಂಗಳೆ ತಾನಾ
ನಡಗತಿದ್ದಳು ಒಂದೇ ಸವನಾ ||
ಕಾಂಚಿಪುರದ ಸಿರಯಾಳನ ಭಕ್ತಿ
ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನಾ ||
ಹೊರಗ ಬಂದ ಎತ್ತ ಹ್ವಾದ್ಯೋ ಮಗನ ಅಂತ
ದುಃಖದಿಂದ ಚಂಗಳೆ ತಾನಾ
ಕರದಾಳ ಮಗನ್ನಾ ||
ಅಪ್ಪಾ ಬರೋ ನೀನು ಇಲ್ಲದೆ ಅತಿಥಿ
ಮಾಡೋದಿಲ್ಲ ಅಂತ ಊಟವನಾ
ಕುಂತಾನ ಸುಮ್ಮನಾ ||
ಸಾಲಿಗಿ ಹೋಗಿದ್ದ ಪುಸ್ತಕ ಕೈಯಾಗ
ಓಡಿ ಬಂದ ಚಿಲ್ಲಾಳ ತಾನಾ
ಯಾಕ ಕರದೆ ಅವ್ವಾ ನನ್ನ ||
ಅಪ್ಪಾ ಬಾರೋ ಎಂದು ಗಪ್ಪನೆ ಎತ್ತಿಕೊಂಡು
ಒಳಗ ಬಂದಾಳ ಆಕ್ಷಣಾ
ಇಳಿಸ್ಯಾಳ ಮಗನ್ನಾ ||
ಮೊದಲಿನ ವೇಷ ಬದಲ ಆಗಿ
ನಗ ಮುಖದಲ್ಲಿ ಕೂತಿದ್ದ ಶಿವನಾ
ಕಂಡಾರು ಅವನ್ನಾ ||
ಗಂಡಾ ಹೆಣತಿ ಮಗಾ ಕೂಡಿಕೊಂಡ
ಗಟ್ಟಾಗಿ ಹಿಡಿದಾರ ಪಾದವನಾ
ಕಾಡಿದ್ದೋ ನಮನ್ನಾ ||
ಮಾಯಾ ರೂಪದಿಂದ ಮೌಂಸದ ಅಡಗಿ
ಪಂಚಾಮೃತ ಆತ ಆಕ್ಷಣಾ
ನೋಡ್ಯಾರು ಅದನ್ನಾ ||
ನಾಲ್ಕು ಎಡಿಮಾಡಿ ನಾಲ್ವರು ಕೂಡಿ
ನಕ್ಕೊಂತ ಮಾಡ್ಯಾರ ಊಟವನಾ
ಆತ ನಿವಾರಣಾ ||
ನಿಮ್ಮ ಸತ್ವ ಪರೀಕ್ಷೆ ಸ್ವಂತ ಮಾಡಲಿಕ್ಕೆ
ಮೃತ್ಯೇಕ ಇಳದ ಬಂದೇನು ನಾನಾ

ಆಗ್ರಿ ಉದ್ದರನಾ ||
ನಿಮ್ಮ ಭಕ್ತಿ ಭಾವಕ್ಕ ನಾನು ಧನ್ಯ ನಾದೆನು
ನಿಮ್ಮ ಸರಿ ಕಾಣೆನು ಯಾರನ್ನಾ
ಮೆಚ್ಚಿದ ನಿಮ್ಮನ್ನಾ ||
ಯಾವ ವರವ ಬೇಕೊ ಬೇಡೋ ಅರಸಾ ನೀನು
ಹರುಷದಿಂದ ಕೊಡುವೆನು ನಾನು
ಯಾಕ ಅನುಮಾನಾ ||
ನಮ್ಮನ್ನ ಕಾಡಿದಂತೆ ಮತ್ಯಾರು ಕಾಡಬ್ಯಾಡ್ರೀ
ಬೇಡುವೆ ಇದನಾ
ಇಲ್ಲ ಮತ್ತೇನಾ ||

**ಒಂದನೆ ಚಾಲ**

ಸಿರಿಯಾಳಗ ಅಂತಾನು ಶಂಕರನು ಭೂಲೋಕ ಜನರನ್ನು
ಕಾಡೊದಿಲ್ಲ ನಾನು
ಹಿಂಗಂತ ವಚನ ಕೊಟ್ಟಾನು ||
ಶಿವಾ ಅಂದ ಬಾಲ ಚಿಲ್ಲಾಳಗ ತಂದಿ ಸಿರಿಯಾಳಗ
ತಾಯಿ ಚಂಗಳಿಗ ಮುಕ್ತಿ ಕೊಡತೇನು
ಚಿರಂಜೀವಿ ಆಗಿ ಇರೋ ನೀನು ||
ವರವ ಕೊಟ್ಟಾನು ಹಿಂಗ ಅವರ ತಲಿಮ್ಯಾಗ
ಹಸ್ತ ಇಟ್ಟಾನು
ಮರ್ತ್ಯ ಬಿಟ್ಟ ಮಾಯ ಆದಾನು ||

**ಎರಡನೇ ಚಾಲ**

ಸಿರಿಯಾಳ ಅನಿಸಿದ ಗುಣಶೀಲಾ
ಚಂಗಳಿ ಹಂತಾವ್ರು ಯಾರಿಲ್ಲಾ ||
ಚಿಲ್ಲಾಳ ಇನ್ನೊ ಸಣ್ಣ ಬಾಲಾ
ಅವನ ಕೀರ್ತಿ ಹಬ್ಬಿತ ನಾಡಮ್ಯಾಲ ||
ತಿಗಡೊಳ್ಳಿ ಮಾರುತಿ ಪ್ರಬಲಾ
ಶಿವ್ಯಾಗ ತಿಳಿಸಿದ ಕವಿ ಅಕಲಾ ||

**ಏರ**

ಪಕ್ಕಾಶ್ಯಾಣೆ ಅಲ್ಲ ಹುಚ್ಚ ಮರಿಕಲ್ಲ
ಸಾರಾಂಶ ತಗದ ನೋಡಿದ ಕತನಾ
ಬರದಾನ ಹಸನಾ ||
ಕಾಂಚಿಪುರದ ಸಿರಿಯಾಳನ ಭಕ್ತಿ

ನೋಡಲಿಕ್ಕೆ ಬಂದ ಭಗವಾನಾ
ಆದ ಪ್ರಸನ್ನಾ ॥

# ಅನುಬಂಧ

**<u>೧. ಕ್ಷೇತ್ರಕಾರ್ಯ ಕೈಗೊಂಡ ಗ್ರಾಮಗಳು</u>**

೧. ಗಿರಿಸಾಗರ ತಾ ॥ ಬೀಳಗಿ ಜಿ ॥ ಬಾಗಲಕೋಟೆ
೨. ಹೆರಕಲ್ ತಾ ॥ ಬೀಳಗಿ ಜಿ ॥ ಬಾಗಲಕೋಟೆ
೩. ಯಂಡಿಗೇರಿ ತಾ ॥ ಬಾದಾಮಿ ಜಿ ॥ ಬಾಗಲಕೋಟೆ
೪. ನವಲಗುಂದ ತಾ ॥ ನವಲಗುಂದ ಜಿ ॥ ಬಾಗಲಕೋಟೆ
೫. ಕೃಷ್ಣಾಪೂರ ತಾ ॥ ರೋಣ ಜಿ ॥ ಗದಗ
೬. ಹುನಗುಂಡಿ ತಾ ॥ ರೋಣ ಜಿ ॥ ಗದಗ
೭. ಯಾದವಾಡ ತಾ ॥ ಗೋಕಾಕ ಜಿ ॥ ಬೆಳಗಾಂವ
೮. ಬಟಕುರ್ಕಿ ತಾ ॥ ರಾಮದುರ್ಗ ಜಿ ॥ ಬೆಳಗಾಂವ
೯. ಬಿದರಿ ತಾ ॥ ಜಮಖಂಡಿ ಜಿ ॥ ಬಾಗಲಕೋಟೆ
೧೦. ಗಲಗಲಿ ತಾ ॥ ಬೀಳಗಿ ಜಿ ॥ ಬಾಗಲಕೋಟೆ
೧೧. ನೀರಲಕೇರಿ ತಾ ॥ ಬಾದಾಮಿ ಜಿ ॥ ಬಾಗಲಕೋಟೆ
೧೨. ಕಲಬಂತಕೇರಿ ತಾ ॥ ಬಾದಾಮಿ ಜಿ ॥ ಬಾಗಲಕೋಟೆ
೧೩. ಮಂಟೇರ ತಾ ॥ ಮುಧೋಳ ಜಿ ॥ ಬಾಗಲಕೋಟೆ
೧೪. ರಾಮದುರ್ಗ ತಾ ॥ ರಾಮದುರ್ಗ ಜಿ ॥ ಬೆಳಗಾಂವ
೧೫. ಬೊಳಚಿಕ್ಕಲುಕಿ ತಾ ॥ ವಿಜಾಪೂರ ಜಿ ॥ ವಿಜಾಪೂರ
೧೬. ಚಿಕ್ಕಗಲಗಲಿ ತಾ ॥ ವಿಜಾಪೂರ ಜಿ ॥ ವಿಜಾಪೂರ
೧೭. ಸುರೇಬಾನ ತಾ ॥ ರಾಮದುರ್ಗ ಜಿ ॥ ಬೆಳಗಾಂವ
೧೮. ಕೆರೂರ ತಾ ॥ ಬಾದಾಮಿ ಜಿ ॥ ಬಾಗಲಕೋಟೆ
೧೯. ನೀರಬೂದಿಹಾಳ ತಾ ॥ ಬಾದಾಮಿ ಜಿ ॥ ಬಾಗಲಕೋಟೆ
೨೦. ನಾವಲಗಿ ತಾ ॥ ಜಮಖಂಡಿ ಜಿ ॥ ಬಾಗಲಕೋಟೆ
೨೧. ವಿಜಾಪೂರ ತಾ ॥ ವಿಜಾಪೂರ ಜಿ ॥ ವಿಜಾಪೂರ

**<u>೨. ಮಾಹಿತಿ ನೀಡಿದವರು</u>**

೧. ಶ್ರೀಮತಿ ಯಲ್ಲವ್ವ ಭೀಮನಗೌಡ ಪಾಟೀಲ ಸಾ ॥ ಯಾದವಾಡ ಕಾಮನ ಕಟ್ಟಿ ಓಣಿ ತಾ ॥ ಗೋಕಾಕ ಜಿ ॥ ಬೆಳಗಾಂವ, ವಯಸ್ಸು ೭೫ ವರ್ಷ
೨. ಶ್ರೀ ಎಚ್ಚರಪ್ಪ ಬಡಿಗೇರೆ ಸಾ ॥ ಯಾದವಾಡ ತಾ ॥ ಗೋಕಾಕ ಜಿ ॥ ಬೆಳಗಾಂವ, ವಯಸ್ಸು - ೫೮ ವರ್ಷ
೩. ಶ್ರೀ ರುದ್ರಪ್ಪ ವನರೊಟ್ಟಿ ಸಾ ॥ ಗಿರಿಸಾಗರ ತಾ ॥ ಬೀಳಗಿ ಜಿ ॥ ಬಾಗಲಕೋಟೆ ವಯಸ್ಸು - ೬೦ ವರ್ಷ
೪. ಶ್ರೀ ಮಲ್ಲಪ್ಪ ಗುನ್ನಿ ಸಾ ॥ ಗಿರಿಸಾಗರ ತಾ ॥ ಬೀಳಗಿ ಜಿ ॥ ಬಾಗಲಕೋಟೆ ವಯಸ್ಸು - ೬೦ ವರ್ಷ

೫. ಶ್ರೀ ಬಾಲಪ್ಪ ದಾಸನ್ನವರ ಸಾ || ಗಿರಿಸಾಗರ ತಾ || ಬೀಳಗಿ ಜಿ || ಬಾಗಲಕೋಟೆ, ವಯಸ್ಸು - ೬೦ ವರ್ಷ

೬. ಶ್ರೀ ಶಂಕರಪ್ಪ ಕೊಣ್ಣೂರ ಸಾ || ಗಿರಿಸಾಗರ ತಾ || ಬೀಳಗಿ ಜಿ || ಬಾಗಲಕೋಟೆ, ವಯಸ್ಸು - ೬೦ ವರ್ಷ

೭. ಶ್ರೀ ಜಿ. ಪಿ. ಲೂತಿ ಶಿಕ್ಷಕರು ಎಂ. ಪಿ. ಎಸ್. ಗಿರಿಸಾಗರ ತಾ || ಬೀಳಗಿ ಜಿ || ಬಾಗಲಕೋಟೆ, ವಯಸ್ಸು - ೩೨ ವರ್ಷ

೮. ಶ್ರೀ ಸೋಮಣ್ಣ ಕಲ್ಲಪ್ಪ ಹಳ್ಳದ ಸಾ || ನವಲಗುಂದ ತಾ || ನವಲಗುಂದ ಜಿ || ಧಾರವಾಡ, ವಯಸ್ಸು - ೮೦ ವರ್ಷ

೯. ಶ್ರೀಮತಿ ಶಂಕ್ರೆಮ್ಮ ಸೋಮಣ್ಣ ಹಳ್ಳದ ಸಾ || ನವಲಗುಂದ ತಾ || ನವಲಗುಂದ ಜಿ || ಧಾರವಾಡ, ವಯಸ್ಸು - ೬೫ ವರ್ಷ

೧೦. ಶ್ರೀ ವಿ. ವಿ. ಗುಡಿ ನಿವೃತ್ತಿ ಶಿಕ್ಷಕರು, ನವಲಗುಂದ, ವಯಸ್ಸು - ೬೫ ವರ್ಷ

೧೧. ಶ್ರೀ ಸಾಗಪ್ಪ ಬಸಪ್ಪ ಚಲವಾದಿ ಸಾ || ನವಲಗುಂದ, ವಯಸ್ಸು - ೬೫ ವರ್ಷ

೧೨. ಶ್ರೀಮತಿ ಮೈರುಣವಿ ಕುಂದಗೊಳ ಸಾ || ನವಲಗುಂದ, ವಯಸ್ಸು - ೫೫ ವರ್ಷ

೧೩. ಶ್ರೀ ಸಂಗನಗೌಡ ಬಸನಗೌಡ ದೊಡ್ಡಗೌಡರ ಸಾ || ಹುನಗುಂಡಿ ತಾ || ರೋಣ, ವಯಸ್ಸು - ೫೫ ವರ್ಷ

೧೪. ಶ್ರೀ ಮಲ್ಲಪ್ಪ ನೀರಲಕೇರಿ ಸಾ || ಹೆರಕಲ್ ತಾ || ಬೀಳಗಿ ಜಿ || ಬಾಗಲಕೋಟೆ, ವಯಸ್ಸು - ೭೦ ವರ್ಷ

೧೫. ಶ್ರೀ ಮಲ್ಲಪ್ಪ ಜಾಡಗೌಡರ ಸಾ || ಹೆರಕಲ್ ತಾ || ಬೀಳಗಿ ವಯಸ್ಸು - ೬೮ ವರ್ಷ

೧೬. ಶ್ರೀ ಮಲ್ಲಪ್ಪ ಬೇವೂರ ಸಾ || ಹೆರಕಲ್ ತಾ || ಬೀಳಗಿ, ವಯಸ್ಸು - ೬೮ ವರ್ಷ

೧೭. ಶ್ರೀ ಭೀಮಪ್ಪ ಬಡಿಗೇರ ಸಾ || ಯಂಡಿಗೇರ ತಾ || ಬಾದಾಮಿ ಜಿ || ಬಾಗಲಕೋಟೆ, ವಯಸ್ಸು - ೭೫ ವರ್ಷ

೧೮. ಶ್ರೀ ಬಿ. ಎಸ್. ವಸ್ತ್ರದ ಸಾ || ಹುನಗುಂಡಿ ತಾ || ರೋಣ, ವಯಸ್ಸು - ೪೦ ವರ್ಷ

**೩. ಜನಪದ ಅರ್ಥಕೋಶ**

| | |
|---|---|
| ವರ್ಷತೊಡಕು | ನಾಗರಪಂಚಮಿ ಮರುದಿವಸದ ದಿನ |
| ಹೊಳಿಗೆ ಕಳಿಸು | ನದಿಯಲ್ಲಿ ಬಿಡುವದು. |
| ಅರಲು | ಗಟ್ಟಿಯಾದ ಹಸಿ ಕೆಸರು |
| ಹೊಳಿಗೆ ಮಾಡು | ನದಿ ಪೂಜೆ ಮಾಡಿ ನೈವೇದ್ಯ ಹಿಡಿಸುವುದು. |
| ಹೆಂಡಿ | ದನದ ಸೆಗಣಿ |
| ಹೆಂಡಿ ಓಕಳಿ | ಸೆಗಣಿಯನ್ನು ಒಬ್ಬರಿಗೊಬ್ಬರಿಗೆ ಎಸೆಯುವದು. |
| ಹೆಸರು ಇಡುವುದು | ನಾಮಕರಣ ಮಾಡುವುದು |
| ಕರಿಕಟಂಬಲಿ | ನಾಗರಪಂಚಮಿ ಮರುದಿವಸದ ದಿನ |
| ಪಂಚೇರ | ೧೨೨೫ ಗ್ರಾಂ. |
| ಬೊರಮಾಳಾ | ಕೊರಳಲ್ಲಿ ಸ್ತ್ರೀಯರು ಹಾಕುವ ಬಂಗಾರದ ಗುಂಡಿನ ಸರ |
| ತಳವಾರ | ಕಾವಲುಗಾರ. |
| ಗುಣಗಡಿಗೆ | ವೀರಶೈವರು ಕೊರಳಲ್ಲಿ ಹಾಕಿಕೊಳ್ಳುವ ಬೆಳ್ಳಿಯ ವಸ್ತು (ಆಭರಣ), ಕರಡಿಗೆ. |